ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರಿಗೆ ಅಷ್ಟಾಗಿ ಪೋಲೀಸಿನವರ ಅನುಭವವಾಗಿಲ್ಲ ಎಂದು ಕಾಣುತ್ತೆ.

ಶ್ರೀ ಕೆ. ಎಚ್. ರಂಗನಾಥ್.—ಐ.ಜಿ.ಪಿ. ಅವರು ತಮ್ಮ ಅಪ್ಪಣೆಪಡೆದು ಇಲ್ಲಿಗೆ ಎಸ್.ಬಿ. ಪೋಲೀಸರನ್ನು ಕಳುಹಿಸಿದ್ದಾರೆಯೇ ಅಥವಾ ಅವರಾಗೇ ಕಳುಹಿಸಿದ್ದಾರೆಯೇ ಅನ್ನುವುದನ್ನು ತಾವು ಸಭೆಗೆ ತಿಳಿಸಬೇಕು. ಇಲ್ಲಿ ಯಾವ ಯಾವ ದಿವಸ ಯಾವ ಯಾವ ಮೆಂಬರುಗಳು ಏನೇನು ಪ್ರಶ್ನೆಗಳನ್ನು ಹಾಕುತ್ತಾರೆ ಯಾರು ಯಾರು ಏನೇನು ಪ್ರಶ್ನೆಗಳನ್ನು ಪಾರ್ಟ್ ನೋಟೀಸ್ ಕ್ವೆಶ್ಚನ್‌ಗಳನ್ನು ಮತ್ತು ಕಾಲಿಂಗ್ ಅಟೆನ್‌ಷನ್ ನೋಟೀಸುಗಳನ್ನು ಕೊಟ್ಟಿದ್ದಾರೆಂಬುದನ್ನೆಲ್ಲಾ ಅವರು ಬರೆದು ಕೊಂಡು ಹೋಗುತ್ತಿದ್ದಾರೆ. ಇಲ್ಲಿ ಪ್ರತಿನಿತ್ಯವೂ ನರಸಿಂಹಮೂರ್ತಿ ಎನ್ನತಕ್ಕವರನ್ನು ನಾನು ನೋಡುತ್ತಿದ್ದೇನೆ. ಆತ ಇಲ್ಲಿ ಪ್ರತಿ ದಿನವೂ ಡ್ಯೂಟಿಯಲ್ಲಿರುತ್ತಾನೆ. ಆತ ಇಲ್ಲಿ ಯಾರ ಅಪ್ಪಣೆ ಪಡೆದು ಬಂದಿದ್ದಾರೆಂಬುದನ್ನು ತಿಳಿಸಬೇಕು. ನಾವೇನು ದೇಶಕ್ಕೆ ಚೈನಾದವರನ್ನು ಕರೆತರುವ ಕೆಲಸ ಮಾಡುವುದಿಲ್ಲ.

Notice under Rule 312 regarding Police Lathi Charge etc., in the Government College Premises

ಶ್ರೀ ಎಚ್. ಸಿದ್ದವೀರಪ್ಪ.—ಅಧ್ಯಕ್ಷರೇ, ನಾನು ರೂಲ್ 312ರ ಪ್ರಕಾರ ಈ ಒಂದು ವಿಷಯವನ್ನು ಎತ್ತಬೇಕೆಂದಿದ್ದೆ. ಆದರೆ ಅಷ್ಟರಲ್ಲೇ ಬೇರೆಯವರು ಪ್ರಶ್ನೆಯನ್ನು ಎತ್ತಿದ್ದಾರೆ. ಈ ವಿಚಾರದಲ್ಲಿ ಚೈಂ ವೇಸ್ಟಾಗಬಾರದು ಅನ್ನುವುದಾಗಿದ್ದರೆ ನಾನು ಕಳುಹಿಸಿರತಕ್ಕ ನೋಟೀಸಿನಲ್ಲೂ ಇದೇ ವಿಚಾರ ಅಡಕವಾಗಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಏನಾದರೂ ಹೇಳಿಕೆ ಕೊಡುವುದಿದ್ದರೆ ಅವರು ಅದನ್ನು ಮಾಡಬಹುದು. ಅದರಿಂದ ಚೈಂ ಉಳಿತಾಯವಾಗಬಹುದು.

Mr SPEAKER.—I have admitted the hon. Member's notice and passed it on to the Chief Minister.

Sri H. SIDDAVEERAPPA.—I am raising it now; let him reply later on.

Mr. SPEAKER.—Is the Hon. Chief Minister in a position to reply?

Sri VEERENDRA PATIL (Chief Minister).—The hon. Member wanted to raise certain issues under some clause of the Rules of Procedure. I said that if the Speaker admitted I had no objection. If you have admitted then I must know what he wants me to say. The notice he has sent says that he wants to raise about the police lathi charge and police beating of students in the college.

Mr. SPEAKER.—Is the Hon. Chief Minister in a position to give information?

Sri VEERENDRA PATIL.—I am in a position to appraise the House of the latest position, what happended fro n this morning up till this hour.

† ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮೀ, ಅಧ್ಯಕ್ಷರೇ, ಈ ದಿವಸ ರೆಜಿಸ್ಟ್ರೇಟರ್ಸ್ ಹೋಮ್‌ನಲ್ಲಿ ನಾನು ಮತ್ತು ನಮ್ಮ ಸ್ನೇಹಿತರು ಶ್ರೀಮಾನ್ ದೇವರಾಜ್ ಅರಸ್‌ರವರು ಇತರರು ಇರಬೇಕಾದರೆ ಕೆಲವು ವಿದ್ಯಾರ್ಥಿಗಳು ಕಣ್ಣೀರು ಹಾಕಿಕೊಂಡು ಬಂದು ಈ ದಿನ ಪೋಲೀಸಿನವರು ಈ ರೀತಿ ಹೊಡೆದಿದ್ದಾರೆ ಎಂದು ತೋರಿಸಿದರು. ಒಬ್ಬ ಪಾಲಿಟೆಕ್ನಿಕ್ ಹುಡುಗ ಹೊಜೇರಿಯಿಂದ ಕಾಫಿ ಕುಡಿದುಕೊಂಡು ಬರುವಾಗ ಅವನನ್ನು ಓಡಿಸಿಕೊಂಡು ಹೋಗಿ ಏಟು ಹೊಡೆದಿದ್ದನ್ನು ತೋರಿಸಿದ. ಇನ್ನೊಬ್ಬನ ತಲೆಗೆ ಗಾಯವಾಗಿದೆ. ಅಮೇಲೆ ಬಂದ ವರ್ತಮಾನದ ಪ್ರಕಾರ ಒಬ್ಬ ಉಪಾಧ್ಯಾಯರಿಗೂ ಕೂಡ ಏಟು ಬಿದ್ದಿದೆ ಎಂದು ಕೇಳಿದೆ. ಅಮೇಲೆ ನಾನು ಪೋಲೀಸ್ ಕಮೀ

(ಶ್ರೀ ಎಚ್. ಸಿದ್ದವೀರಪ್ಪ)

ಷನರಿಗೆ ಫೋನ್ ಮಾಡಿ ಕೇಳಿದೆ. ಅವರು ನ್ಥಳಕ್ಕೆ ಹೋಗಿ ನೋಡುತ್ತೇನೆ ಎಂದು ಫೋನಿನಲ್ಲಿ ಹೇಳಿದರು. ಈವೊತ್ತಿನ ದಿವಸ ಪತ್ರಿಕೆಗಳಲ್ಲಿ ಪುನಃ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾರೆಂದು ಓದಿದೆ. ನಮಗೂ ಕೂಡ ನಮ್ಮ ಮಕ್ಕಳ ವಿದ್ಯಾಭ್ಯಾಸ ಕೆಡಬಾರದು, ಕೆಟ್ಟರೆ ತೊಂದರೆ ಯಾಗುತ್ತದೆ, ಕಾಲೇಜುಗಳು ಪ್ರಾರಂಭವಾಗಲಿ ಅಂತ ಹಿರಿಯ ಆಸೆ ಇದ್ದರೂ ಕೂಡ ಪುನಃ ಪುನಃ ಈ ರೀತಿ ಚಳುವಳಿ ಆಗುತ್ತಾ ಇರುವುದು ನೋಡಿದರೆ ನಮ್ಮಲ್ಲಿ ಮೊದಲು ಕಾಲರಾ ಪ್ಲೇಗು ಬಂದರೆ ಒಂದು ಸಾರಿ ಶಾಂತಿಯಾಗಿ ಅದು ಎಲ್ಲಿಯಾದರೂ ಬಾಕಿ ಇದ್ದರೆ ಅದು ಪುನಃ ಮರುಕಳಿಸುತ್ತದೆ. ಅದೇ ರೀತಿ ಇಲ್ಲಿ ಚಳುವಳಿ ಮರುಕಳಿಸಿದರೆ ಅದು ದೇಶದಲ್ಲಿ ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂದು ಅರ್ಥಮಾಡಿಕೊಳ್ಳುವುದು ತುಂಬ ಕಷ್ಟವಾಗಿದೆ. ಸರ್ಕಾರಕ್ಕೆ ಶಾಂತಿ ಬೇಕೇ, ಬೇಡವೇ ! ಶಾಂತಿ ಬೇಕು ಎಂದು ಬಾಯಲ್ಲಿ ಜಪಿಸುತ್ತಾರೆ. ಪೋಲೀಸಿನವರೇ ಪೊದಲು ಕಲ್ಲು ಹೊಡೆಯಲಿಕ್ಕೆ ಪ್ರಾರಂಭ ಮಾಡಿ ಅವರು ಡಿಫನ್ಸ್ ಮಾಡುತ್ತೇವೆ ಎಂದು ಹೇಳಿ ಈ ರೀತಿ ನಡೆಯುತ್ತದೆ. ಇದನ್ನು ನೋಡಿದರೆ ಯಾರದು ತಪ್ಪು ಎಂದು ಹೇಳಬೇಕು. ನಮಗೆ ಬಂದಿರತಕ್ಕ ವರ್ತಮಾನ ಏನೇ ಇರಲಿ ಒಂದು ವೇಳೆ ಪೋಲೀಸಿನವರಿಗೆ ಏಟು ಬಿದ್ದರೂ, ಏನಾದರೂ ಹುಡುಗರೇ ಏಜೆಂಟ್ ಪ್ರವೋಕೇಟರ್ಸ್ ಆಗಿದ್ದರೂ ನಾವು ಶಾಂತಿಯಿಂದ ನಡೆದುಕೊಂಡು ಹೋಗಬೇಕಾದುದೇ ಜಾಣತನ. ಇದು ನನ್ನ ಅನುಭವಕ್ಕೆ ಬಂದಿದೆ. ಎಂತಹ ಘಟನೆಗಳು ನಡೆದರೂ ಫೈರಿಂಗ್ ಮಾಡಬೇಕಾದ ಪರಿಸ್ಥಿತಿ ಬಂದರೂ, ಪೋಲೀಸಿನವರು ಸ್ಪಲ್ಪ ಟ್ಯಾಕ್ಟ್‌ಫುಲ್ ಆಗಿ ಶಾಂತಿಯಿಂದ ಹ್ಯಾಂಡಲ್ ಮಾಡಿದರೆ, ಎಂತಹ ಪರಿಸ್ಥಿತಿಯನ್ನೂ ಎದುರಿಸುವುದಕ್ಕೆ ಅವಕಾಶ ಇರುತ್ತದೆ. ಅದು ಬಿಟ್ಟು ಮುಖ್ಯಮಂತ್ರಿಗಳು ಏನು ಬಂದರೂ ಫರ್ಮ್ ಆಗಿ ಡೀಲ್ ಮಾಡಿ ಎಂದು ಡೈರೆಕ್ಟೀವ್ ಕೊಟ್ಟದ್ದಾರೆಯೋ ಏನೋ ಎನ್ನುವುದು ಗೊತ್ತಾಗುತ್ತಾ ಇಲ್ಲ. ಈಗಾಗಲೇ ಕೆಲವು ಕಡೆ ಅಶಾಂತಿ ಕಾಳ್ಗಿಚ್ಚಿನಂತೆ ಹರಡುತ್ತಾ ಇದೆ. ಬೆಂಗಳೂರಿನಲ್ಲಿ ರಾತ್ರಿ ಥರ್ಜು ಪುರುವಾಯಿತು ಎಂದರೆ ಇಡೀ ಸ್ಟೇಟ್‌ನಲ್ಲಿ ಅಶಾಂತಿ ಪುರುವಾಗುತ್ತದೆ. ಇದು ಒಳ್ಳೆಯದಲ್ಲ. ಇದಕ್ಕೆಲ್ಲಾ ಕಾರಣ ಎಕ್ಸ್‌ಪೋ ಕುಣಿತ. ಈಗಲಾದರೂ ಇದನ್ನು ನಿಲ್ಲಿಸುತ್ತಾರೆಯೇ ! ಇದನ್ನು ನಿಲ್ಲಿಸಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆಯೇ ? ಮಾನ್ಯ ಸಭೆಯ ನಾಯಕರು ಇದರ ಬಗ್ಗೆ ಹೇಳಿ ಶಾಂತಿ ವಾತಾವರಣ ಬರಲಿಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು. ಈ ವಿಚಾರದಲ್ಲಿ ನಾವು ಯಾರನ್ನೂ ಪ್ರೋವೋಕ್ ಮಾಡತಕ್ಕ ರೀತಿಯಿಂದ ಮಾಡುತ್ತಾ ಇಲ್ಲ. ಶಾಂತಿ ಬರತಕ್ಕ ರೀತಿಯಿಂದ ವರ್ತನೆ ಮಾಡಬೇಕು, ಪರಿಸ್ಥಿತಿ ಉಲ್ಬಣಾವಸ್ಥೆಗೆ ಹೋದರೆ ನಾವೆಲ್ಲರೂ ಉಳಿಯತಕ್ಕದ್ದು ಬಹಳ ಕಷ್ಟ ಬರುತ್ತದೆ. ಈ ದಬ್ಬಾಳಿಕೆ ಕಾರ್ಯಕ್ರಮ ಮಾಡುವುದು ಯಾರಿಗೂ ವಿಹಿತವಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

Sri D. DEVARAJ URS (Hunsur).—I submit to the Chair that under Rule 312, Sri Siddaveerappa has sent a notice to raise a particular point. On this point, if any other Hon. Member of this House wants to point out certain facts, I should like to know whether the Chair cannot permit such a Member ?

Mr. SPEAKER.—The position is this : Rule 312 is meant to give factual information of events which the Hon. Member raising it wants to have. It is not a debate. It cannot be a general matter also. It is permitted because the Hon. Member who gives notice knows the particular fact and wants to raise it. After the explanation by the Hon. Minister, if one or two members want clarifications, that may be permitted.

Sri D. DEVARAJ URS.—As Mr. Siddaveerappa pointed out, I was also present when the students came and represented the matter. The rule does not say that the Chair should not permit any other Member but only the member who raises the point.

Mr. SPEAKER.—The Hon. Member may see that this Rule comes under the Chapter ' Point of Order '. It is of the same nature. I can permit clarifications, but not raising questions like this.

Sri D. DEVARAJ URS.—Supposing you permit me now, I might state what I have heard. Otherwise, if I have to seek clarifications after the Chief Minister's explanation, then I may have to rebut what he has said.

Mr. SPEAKER.—Only clarifications may be asked, but no speech is permitted under this Rule.

Sri H. N. NANJE GOWDA (Arkalgud).—Supposing something more about the same matter has to be brought to the notice of the House ? Are we to give notice under Rule 312 tomorrow and raise the same issue again ?

Mr. SPEAKER.—If a new matter comes up, I can consider it.

Sri D. DEVARAJ URS.—It is in your discretion either to permit a member who knows something about it or not. I am appealing to you to use your discretion. If you permit me, I can speak a few points. I am not challenging your ruling. But the rules in no way prevent the Speaker from allowing other members. It is not as if I am trying to speak any extraneous matter in this behalf. I was also present at that time.

Mr. SPEAKER.—The Rule admits of only a statement of facts. However, presiding Officer can hear others also. Under that condition, I will permit the Hon. Member later on.

† ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸ್ವಾಮಿ, ತಾವು ಇದಕ್ಕೆ ಸ್ವಲ್ಪ ಅವಕಾಶ ಕೊಡಬೇಕು. ಏತಕ್ಕೆ ಎಂದರೆ ಹಾಸ್ಟಲ್‌ನಲ್ಲಿ ಇರತಕ್ಕಂಥ ಹುಡುಗರನ್ನು ಹಾಸ್ಟಲ್ ಒಳಗೆ ನುಗ್ಗಿ ಹೊಡೆಯುವುದು ಎಂದರೆ ಏನು ಅರ್ಥ? ನೀವು ಕಾರ್‌ನಲ್ಲಿ ಓಡಾಡುತ್ತೀರಿ. ನೀವು ನಡೆದುಕೊಂಡು ಹೋದರೆ ಹುಡುಗರು ಕಲ್ಲು ಹೊಡೆಯುತ್ತಾರೆ. ಪೋಲೀಸಿನವರು ಮನೆಗೆ ನುಗ್ಗಿ ಹೊಡೆಯುವುದು, ಹಾಸ್ಟಲ್‌ನೊಳಕ್ಕೆ ನುಗ್ಗಿ ಹೊಡೆಯುವುದು ಈ ಪದ್ಧತಿ ನಡೆಯುತ್ತಾ ಇದೆ. ಚಿತ್ರದುರ್ಗದಲ್ಲಿ ಹಾಸ್ಟಲ್ ಒಳಗೆ ನುಗ್ಗಿ ಊಟಮಾಡುವ ಹುಡುಗರಿಗೆ ಹೊಡೆದಿದ್ದಾರೆ. ಮೂರು ಹಲ್ಲು ಉದುರಿ ಹೋಗಿದೆ. ಮೈಸೂರಿನಲ್ಲಿ ಹಾಸ್ಟಲ್‌ಗೆ ನುಗ್ಗಿ ಹೊಡೆದಿದ್ದಾರೆ. ಎರಡ್ಮೂರಿನಿಂದಲೂ ಹುಡುಗರು ಬಂದು ಹೇಳಲಿಲ್ಲ. ಸಿದ್ದವೀರಪ್ಪನವರನ್ನು ಹುಡುಕಿಕೊಂಡು ಬಂದ ಹುಡುಗರಿಗೆ ಎಲ್ಲಿ ಗಾಯವಾಗಿದೆ ಎಂದು ತಮ್ಮ ಕಣ್ಣಿಗೆ ಕಂಡಿದ್ದನ್ನು ನೋಡಿ ನೋಟೀಸ್ ಕೊಟ್ಟಿದ್ದಾರೆ.

ಈ ಹೊತ್ತು ನಮ್ಮ ಓಡಾಟವನ್ನು ಗಮನಿಸುವುದಕ್ಕೆ ಪೋಲೀಸಿನವರನ್ನು ಗೃಹ ಮಂತ್ರಿಗಳು ಹಾಕಿದ್ದಾರೆ.

2-30 P.M.

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇರೆ ವಿಷಯಕ್ಕೆ ಹೋಗುತ್ತಿದ್ದಾರೆ. ಅದಕ್ಕೆಲ್ಲ ಪ್ರೊಸೀಜರ್ ಇದೆ. ಈಗ ಮುಖ್ಯಮಂತ್ರಿಗಳು ಮಾತನಾಡಲು ಅವಕಾಶ ಕೊಡಿ. ಕ್ವಾರಿಫಿಕೇಷನ್ ಬೇಕಾದರೆ ಆಮೇಲೆ ಕೇಳಬಹುದು.

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸಿದ್ದವೀರಪ್ಪನವರು ಈ ಹೊತ್ತು ಬೆಳಿಗ್ಗೆ ಏನು ನಡೆದಿದೆ ಎನ್ನುವುದರ ಬಗ್ಗೆ ಪ್ರಸ್ತಾಪಮಾಡಿ, ಸರ್ಕಾರದವರು ಶಾಂತ ವಾತಾವರಣ ಕಾಪಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು, ನಾವೇನೂ ಹುಡುಗರಿಗೆ ಪ್ರೇರೇಪಿಸಬೇಕು ಎನ್ನುವ ವಿಚಾರದವರಲ್ಲ, ರಾಜ್ಯದಲ್ಲಿ ಸ್ಥಾಪನೆ ಆಗಬೇಕು ಎನ್ನುವ ವಿಚಾರದವರಿದ್ದೇವೆ ಎಂದು ಕೆಲವು ವಿಚಾರಗಳನ್ನು ಹೇಳಿದರು. ಎಕ್ಸ್‌ಪೋ ಬಗ್ಗೆ ಸರ್ಕಾರದವರು ಏನು ಹೇಳಬೇಕು ಎನ್ನುವುದನ್ನು ಹೇಳಿ ಒಂದು ಸಮಾಧಾನ ತಂದಿದ್ದರೆ ಈ ಪರಿಸ್ಥಿತಿಯುಂಟಾಗುತ್ತಿರಲಿಲ್ಲ ಎಂದು ಹೇಳಿದರು.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ನಾನು ಹೇಳಲಿಲ್ಲ. ಎಕ್ಸ್‌ಪೋ ಗಲಭೆಯಿಂದ ಇದೆಲ್ಲ ಪ್ರಾರಂಭವಾಗಿದೆ ಎಂದು ಹೇಳಿದೆ ಅಷ್ಟೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೊಟ್ಟಿರುವ ವಿವರಣೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಎಕ್ಸ್‌ಪೋ ಬಗ್ಗೆ ಹೇಳುವುದಕ್ಕೆ ನಾನು ಹೊರಟಿಲ್ಲ. ಆ ವಿಷಯದ ಬಗ್ಗೆ ಭಾಷಣ ಮಾಡಬೇಕಾಗಿದ್ದರೆ ತಮ್ಮ ಪರ್ಮಿಷನ್ ತೆಗೆದುಕೊಂಡು ಮಾಡುತ್ತೇನೆ. ಬಹುಶಃ ನೀವು ಪರ್ಮಿಷನ್ ಕೊಟ್ಟರೆ ಭಾಷಣ ಮಾಡುವ ಅಧಿಕಾರವಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಈ ಹೊತ್ತು ನಾನು ಹೇಳಬೇಕಾದಂಥದ್ದು ಎಂದರೆ, ಮೊನ್ನೆ ದಿವಸ ಎಕ್ಸ್‌ಪೋ ಬಗ್ಗೆ ಚರ್ಚೆಯಾದಾಗ ಕೆಲವು ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದರು. ಆದರೆ ದುರ್ದೈವದಿಂದ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ಅವಕಾಶವಿರಲಿಲ್ಲ. ಒಂದು ವೇಳೆ ಉತ್ತರ ಕೊಡುವುದಕ್ಕೆ ಅವಕಾಶವಿದ್ದಿದ್ದರೆ ಬಹುಶಃ ಈ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರ ಮನಸ್ಸಿನಲ್ಲಿ ಏನೊಂದು ಸಂಶಯ ಹೊಸೆಯುತ್ತಿದೆಯೋ ಅದಕ್ಕೆ ಅವಕಾಶ ಬಹಳ ಕಡಿಮೆ ಇರುತ್ತಿತ್ತು ಎನ್ನುವ ಮಾತನ್ನು ಹೇಳುತ್ತೇನೆ.

Sri R. DAYANANDA SAGAR (Chamarajapet).—Now that the Chief Minister wants to speak about Expo, let the House have the opportunity to discuss it threadbare.

Mr. SPEAKER.—That matter is not before me.

Sri R. DAYANANDA SAGAR.—Yesterday only two members spoke. Otherwise, we would have exposed the Government to a fuller extent.

Sri VEERENDRA PATIL .—Sir, in reply I must have my own say. Why anybody should interfere ?

Sri R. DAYANANDA SAGAR.—We have a right to interfere.

Sri VEERENDRA PATIL.—If it is conceded by the Hon. Chair that everybody has got the right to interfere, we will be interfering with each other and no business could be transacted.

Mr. SPEAKER.—If the Member or the Minister speaking yields, one can interfere, but not otherwise.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ. ಈ ಹೊತ್ತು ಬೆಳಗಿನ ಘಟನೆಯ ಬಗ್ಗೆ ಹೇಳುವುದಾದರೆ, ಕೆಲವು ದಿವಸಗಳಿಂದ ಕಾಲೇಜುಗಳಿಗೆ ರಜ ಇತ್ತು ಎನ್ನುವುದು ಈ ಮಾನ್ಯ ಸಭೆಗೂ ಗೊತ್ತಿದೆ. ವೈಸ್ ಛಾನ್ಸಲರು ಎಲ್ಲ ಕಾಲೇಜುಗಳ ಪ್ರಿನ್ಸಿಪಾಲರುಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ, ಕಾಲೇಜು ಕಾಂಪೌಂಡುಗಳಲ್ಲಿ ಮತ್ತು ಈ ರಾಜಧಾನಿಯಲ್ಲಿ ಶಾಂತಿ ವಾತಾವರಣ ಇಡಬೇಕಾಗಿದ್ದರೆ ಕೆಲವು ದಿವಸ ಕಾಲೇಜು ಮುಚ್ಚಬೇಕು ಎಂದು ನಿರ್ಣಯ ಮಾಡಿದರು. ಆ ಅವಧಿ ನಿನ್ನೆಗೆ ಮುಗಿಯಿತು. ಈ ಹೊತ್ತು ಕಾಲೇಜುಗಳು ಪ್ರಾರಂಭವಾಗಬೇಕಾಗಿತ್ತು. ನಾನು ಹಿಂದಿನ ವಿಷಯದ ಬಗ್ಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಚಿತ್ರದುರ್ಗದಲ್ಲಿ ನಡೆದದ್ದು, ಮತ್ತೊಂದು ನಡೆದದ್ದು ಕುರಿತು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನೆಲ್ಲ ಹೇಳುತ್ತ ಹೋದರೆ ಎಕ್ಸ್‌ಪೋ ಮೇಲೆ ಚರ್ಚೆ ಮಾಡಿದ ಹಾಗೆ ಆಗುತ್ತದೆ. ಆದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಮುಂದೆ ಬಂದಿರುವ ವರದಿಗಳ ಪ್ರಕಾರ ಈ ಹೊತ್ತು ಏನಾಗಿದೆ ಎನ್ನುವುದನ್ನು ಮಾತ್ರ ಹೇಳುತ್ತೇನೆ.

ಈಗ ಹತ್ತು ಹನ್ನೆರಡು ದಿವಸಗಳಿಂದ ಕಾಲೇಜುಗಳು ಬಂದಾಗಿದ್ದು ಇದರ ಪರಿಣಾಮ ಅಥವಾ ಕೆಟ್ಟ ಪರಿಣಾಮ ಮುಕ್ಕಳ ಮೇಲೆ ಆಗುತ್ತದೆಯೇ ಹೊರತು ಮತ್ತೆ ಯಾರ ಮೇಲೂ ಆಗುವುದಿಲ್ಲ ಎಂದು ತಿಳಿದು ಕಾಲೇಜುಗಳನ್ನು ಮುಚ್ಚಬಾರದು, ತೆಗೆಯಬೇಕು ಎನ್ನುವ ದೃಷ್ಟಿಯಿಂದ ಬಹುಶಃ ಕಾಲೇಜುಗಳನ್ನು ತೆಗೆದರು. ದುರ್ದೈವದಿಂದ ಕಾಲೇಜುಗಳು ನಡೆದಾಗ ಏನು ಪರಿಸ್ಥಿತಿ ಇತ್ತೋ ಅದು ಮತ್ತೆ ಈ ಹೊತ್ತು ಪ್ರಾರಂಭವಾಯಿತು. ಕಾಲೇಜುಗಳು ಪ್ರಾರಂಭವಾದ ತಕ್ಷಣ, ತಮಗೆ ಹೇಳಬೇಕಾಗಿದ್ದರೆ, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಕಾಂಪೌಂಡು ಒಳಗೆ ಕಲ್ಲನ್ನು ತೂರಲಿಕ್ಕೆ ಹುಡುಗರು ನಿಂತು ಹೊರಗೆ ಹೋಗುವಂಥ, ಬರುವಂತ ವಾಹನಗಳ ಮೇಲೆ

ಒಂದೇ ಸಮನೆ ಕಲ್ಲನು ತೂರಲಿಕ್ಕೆ ಪ್ರಾರಂಭ ಮಾಡಿದರು. ಅದೇ ರೀತಿ ಸೆಂಟ್ರಲ್ ಕಾಲೇಜು ಕಾಂಪೌಂಡ್ ಒಳಗಡೆ ನಿಂತು ಒಂದೇ ಸಮನೆ ಹಾದಿಯಲ್ಲಿ ಹೋಗುವಂಥ ಸೈಕಲ್ಲುಗಳ ಮೇಲೆ, ವಾಹನಗಳ ಮೇಲೆ, ಪಾದಚಾರಿಗಳ ಮೇಲೆ, ಹೀಗೆ ಎಲ್ಲರ ಮೇಲೆ ಮತ್ತು ಪೋಲೀಸು ವಾಹನಗಳ ಮೇಲೆ ಕಲ್ಲು ತೂರುವುದಕ್ಕೆ ಪ್ರಾರಂಭ ಮಾಡಿದರು.

ಶ್ರೀ ಎಚ್. ಎನ್. ನಂಜೇಗೌಡ.—ನನ್ನದೊಂದು ಕ್ರಿಯಾಲೋಪವಿದೆ ಸ್ವಾಮಿ, ನಮಗೆ ಬಂದಿರುವ ವರದಿಗಳ ಪ್ರಕಾರ ಹುಡುಗರು ಯಾರೂ ಕಲ್ಲು ಹೊಡೆಯುಲಿಲ್ಲ. ಕಲ್ಲು ಹೊಡೆಯಲು ಪೋಲೀಸಿನವರೇ ಏರ್ಪಡಿಸಿದ್ದಾರೆ ಎಂದು ಸರ್ಕಾರದ ಗಮನಕ್ಕೆ ತಂದರೂ ಕ್ರಮ ತೆಗೆದುಕೊಳ್ಳುವುದಿಲ್ಲ. ಪ್ರದೇಶ ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷಕ ಹತ್ತಿರ ನೆಂಟರೊಬ್ಬರನ್ನು ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್ ಎಂದು ಮಾಡಿ ಇಲ್ಲಿಗೆ ತಂದು, ವಿದ್ಯಾರ್ಥಿಗಳ ಮೇಲೆ ಮುಯಿ ತೀರಿಸಿಕೊಳ್ಳಬೇಕು ಎಂದು ಒಂದು ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ.

The Chief Minister is telling that the students began stoning the vehicles. It would not be correct to make a statement without investigating the matter.

Mr. SPEAKER.—I regret very much to say that rule 311 has been totally abused. The Hon. Member wants to counter the Statement of the Chief Minister. Counter statement should not be made while raising a point of order. A point of order shall relate to the interpretation or enforcement of rules. Therefore, I hold that there is absolutely no point of order.

Sri H. N. NANJE GOWDA.—We know what is provided in the rules. If we want to raise the privilege motion, the Chair is not allowing ns. What shall we do in the matter ?

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಇದೇ ರೀತಿಯಿಂದ ಈ ಕಲ್ಲು ಎಸೆಯುವ ಕೆಲಸ ರಾ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಬಳಿಯಿಂದಲೂ ಪ್ರಾರಂಭವಾಯ್ತು. ಇದು ಸುಮಾರು ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗಿ ಹನ್ನೆರಡೂವರೆವರೆಗೆ ನಡೆದ ಬಗ್ಗೆ ಬಂದಿರುವ ವರದಿ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಈ ರೀತಿಯಿಂದ ವಿಪರೀತವಾಗಿ ಕಲ್ಲು ತೂರುವ ಕೆಲಸವನ್ನು ಪ್ರಾರಂಭಿಸಿದ ಮೇಲೆ ಕಲ್ಲು ತೂರುತ್ತಿದ್ದವರನ್ನು ಚದುರಿಸಬೇಕಾದ್ದು ಪೋಲೀಸಿನವರ ಕರ್ತವ್ಯ. ಅದನ್ನು ಅವರು ಪೂರೈಸಿದ್ದಾರೆ. ಕಾಂಪೌಂಡಿನಲ್ಲಿ ನಿಂತು ಹೊರಗಡೆ ಹೋಗುವವರ ಮೇಲೆ, ಓಡಾಡುವ ವಾಹನಗಳ ಮೇಲೆ ಕಲ್ಲುಗಳನ್ನು ತೂರಿದಮೇಲೆ ಅದರಿಂದಾಗುವ ಅನಾಹುತವನ್ನು ತಡೆಯಲು ಸೆಂಟ್ರಲ್ ಕಾಲೇಜು ಪ್ರೆಮಿನಸ್ ಕಾಂಪೌಂಡಿನೊಳಕ್ಕೆ ಮತ್ತು ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಕಾಂಪೌಂಡಿನೊಳಕ್ಕೆ ಹೋಗಲು ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಪರ್ಮಿಷನ್ ಪೋಲೀಸಿನವರು ತೆಗೆದುಕೊಳ್ಳಬೇಕಾಗಿ ಬಂತು. ಪೋಲೀಸ್ ವೆಹಿಕಲ್ಸ್ ಕಡೆಗೂ ಕಲ್ಲುಗಳನ್ನು ತೂರಲಾಯ್ತು. ಹೀಗೆ ಕಾಂಪೌಂಡಿನೊಳಗಿನಿಂದ ಕಲ್ಲು ತೂರಿದ ಪರಿಣಾಮವಾಗಿ 12 ಜನ ಪೋಲೀಸರು ಗಾಯಗೊಂಡರು. ಅವರಲ್ಲಿ ಡೆಪ್ಯುಟಿ ಕಮಿಷನರ್ ಆಫ್ ಪೋಲೀಸ್—ರಾ ಅಂಡ್ ಆರ್ಡರ್—ಒಬ್ಬರು, ಮತ್ತು ಅಸಿಸ್ಟೆಂಟ್ ಕಮಿಷನರ್ ಆಫ್ ಪೋಲೀಸ್ ಇವರುಗಳು ಸೇರಿದ್ದಾರೆ. ಹೀಗೆ ಹಲವರಿಗೆ ಗಾಯಗಳಾಗಿವೆ. ಒಂದು ಬಿ ಟಿ ಎಸ್ ಬಸ್ ಮತ್ತು 4 ಪೋಲೀಸ್ ವ್ಯಾನುಗಳಿಗೆ ಇದರಿಂದ ಡ್ಯಾಮೇಜ್ ಆಗಿದೆ. ಹನ್ನೆರಡೂವರೆಯವರೆಗೆ ಈ ಪರಿಸ್ಥಿತಿ ಇತ್ತು. ಹುಡುಗರು, ಮಕ್ಕಳು ವಗೈರೆಯವರು ಗಾಯಗೊಂಡಿರುವುದು ಮುಂತಾದ್ದು ಗೊತ್ತಾಗಿಲ್ಲ. ಅದರ ಬಗ್ಗೆ ಇನ್ ಫರ್ಮೇಷನ್ ಕಲೆಕ್ಟ್ ಮಾಡುವರು. ಈ ಬಗ್ಗೆ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದ್ದಾರೆ, ನಾನೂ ಹೇಳಬೇಕಾಗಿದೆ. ಈ ದಿವಸ ದುರ್ದೈವದಿಂದ ಈ ಸರಕಾರ ಪೋಲೀಸ್ ದಬ್ಬಾಳಿಕೆಯಿಂದ ಆದಷ್ಟಿತ ನಡೆಸಬೇಕೆಂದು ಪ್ರಯತ್ನ ಪಡುತ್ತಿದೆ ಎಂಬ ಆಪಾದನೆ ಹೊರಿಸಲು ಪ್ರಯತ್ನ ನಡೆಯುತ್ತಿದೆ. ಆದರೆ ನಾನು ಹೇಳುವುದು ಈ ದಿವಸ ಹುಡುಗರು ಅಥವಾ ದೊಡ್ಡವರು ಯಾರೆ ಆಗಲಿ ಚಳವಳಿಯನ್ನು ಅಹಿಂಸಾತ್ಮಕವಾಗಿ ಮಾಡಲೂ ಯಾರೂ ಅಡ್ಡಿ ಬರಬಾರದು, ಅದನ್ನು ಒಪ್ಪುತ್ತೇನೆ. ಆದರೆ ಯಾರಾದರೂ ಹಿಂಸಾತ್ಮಕವಾಗಿ ಚಳವಳಿ ನಡೆಸುತ್ತಿದ್ದರೆ ಪೋಲೀಸಿನವರ ಸುಮ್ಮನೆ ಕೂಡುವುದಕ್ಕಾಗುವುದಿಲ್ಲ. ನಾವು ಸ್ಪಷ್ಟವಾಗಿ ಹೇಳಬೇಕು, ಇಂದು ಟೇರ್‌ಗ್ಯಾಸ ಪ್ರಯೋಗಮಾಡಿಲ್ಲ, ಫೈರಿಂಗ್ ಆಗಿಲ್ಲ. ಆದರೆ ಎಲ್ಲ ಹುಡುಗರು ಕಲ್ಲುಗಳನ್ನೆಸೆಯುತ್ತಿದ್ದರೂ ಅಲ್ಲಗೆ ಪೋಲೀಸರು ಹೋಗಿ ಹುಡುಗರನ್ನು ಚದುರಿಸಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಪೋಲೀಸಿನವರು ಹುಡುಗರು ಕಟ್ಟಡದೊಳಗಿದ್ದರೂ ಅಲ್ಲಿಗೆ ನುಗ್ಗಿ ಹೊಡೆಯುತ್ತಾರೆ, ಅದಕ್ಕೇನು ಹೇಳುತ್ತೀರಿ ! ಅವರು ನಾವು ಕೆಲವರು ಸರಕಾರದ ಹೆಸರಿಗೆ ಮಸಿ ಬಳೆಯಲು ಪ್ರಯತ್ನಮಾಡುತ್ತಿದ್ದೇವೆಂದು ಅರ್ಥ ಬರುವ ರೀತಿಯಲ್ಲಿ ಹೇಳುತ್ತಿದ್ದಾರೆ.

ಅಧ್ಯಕ್ಷರು.—ತಾವು ಆದನ್ನು ಆಮೇಲೆ ಕೇಳಿ.

ಶ್ರೀ ಕೆ. ಎಚ್. ರಂಗನಾಥ್.—ಅವರು ಬಹಳ ಹುಷಾರಾಗಿ ಪದಗಳನ್ನುಪಯೋಗಿಸುತ್ತಿದ್ದಾರೆ. ಶ್ರೀ ವೀರೇಂದ್ರ ಪಾಟೀಲರು ಪೋಲೀಸರನ್ನು ಉಪಯೋಗಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದಾರೆಂದು ಜನರಿಗೆ ತಿಳಿಸಲು ಪ್ರಯತ್ನ ನಾವು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಮೈಸೂರು, ಚಿತ್ರದುರ್ಗ ಬೆಂಗಳೂರು ಮುಂತಾದ ಕಡೆಗಳಲ್ಲಿ ಹಿಂದೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಹಾಸ್ಟಲುಗಳಿಗೆ ಪೋಲೀಸರು ನುಗ್ಗಿ ಹುಡುಗರನ್ನು ಹೊಡೆದಿದ್ದಾರೆ, ಆದರೆ ಅದು ಈ ದಿವಸದ ಪ್ರಶ್ನೆ ಅಲ್ಲ. ಹಿಂದಿನಿಂದ ಈ ರೀತಿ ಆಚರಣೆಯಾಗಿ ನಡೆಯುತ್ತಿದೆ. ನನ್ನ ಮನೆಯೆದುರಿಗೆ ಪೋಲೀಸರು ಬಾರಿಸಿದ್ದನ್ನು, ಹೊಡೆದದ್ದನ್ನು ನಾನು ನೋಡಿದ್ದೇನೆ. ಅದು ಆ ದಿವಸದಿಂದ ಇಂದಿನವರೆಗೆ ನಡೆಯುತ್ತಿದೆ. ನನಗೆ ಮುಖ್ಯಮಂತ್ರಿಗಳ ಬಗ್ಗೆ ಗೌರವವಿದೆ.

ಅಧ್ಯಕ್ಷರು.—ಆದನ್ನು ಅವರ ಸ್ಟೇಟ್‌ಮೆಂಟ್ ಆದನಂತರ ಹೇಳಿ.

ಶ್ರೀ ಕೆ. ಎಚ್. ರಂಗನಾಥ್.—ಬರೀ ವಿದ್ಯಾರ್ಥಿಗಳು ಕಲ್ಲು ತೂರಿದರೆಂದು ಹೇಳುತ್ತಿದ್ದಾರೆ. ಅದಕ್ಕೇನು ರಿಕಾರ್ಡಿದೆ ? ಚಿತ್ರದುರ್ಗದಲ್ಲಿ ಕಾಲೇಜು ಹುಡುಗರು ಊಟಮಾಡುತ್ತಿದ್ದರೆ ಅಲ್ಲಿಗೆ ಹೋಗಿ ಹೊಡೆದಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಚರ್ಚೆ ಯಾವರೀತಿ ನಡೆಯುತ್ತಿದೆಯೆಂಬುದು ನನಗೆ ಗೊತ್ತಿದೆ. ನಾನು ಪ್ರಥಮದಲ್ಲೇ ಹೇಳಿದೆ, ಈ ದಿವಸ ನಡೆದಿರುವ ಘಟನೆ ಮಾತ್ರ ಹೇಳುತ್ತೇನೆ. ಹಿಂದಿನದನ್ನು ಹೇಳುವುದಿಲ್ಲ ಎಂದು ಸ್ಪಷ್ಟಮಾಡಿದೆ. ಶ್ರೀ ರಂಗನಾಥ ಕೇಳುತ್ತಿರುವುದೇನೆಂಬುದು ಗೊತ್ತಾಯಿತು. ಅದನ್ನೆಲ್ಲಾ ಹೇಳುವುದಕ್ಕೆ ಪ್ರಾರಂಭಿಸಿದರೆ ಮತ್ತೊಬ್ಬರು ಇನ್ನೊಂದು ಕೇಳಬಹುದು. ಇಂದು ನಡೆದಿರುವ ಘಟನೆ ಮಾತ್ರ ನಾನು ನನಗೆ ಬಂದಿರುವ ವರದಿ ಪ್ರಕಾರ ಹೇಳುತ್ತಿದ್ದೇನೆ. ಶ್ರೀ ಸಿದ್ಧವೀರಪ್ಪನವರು ಕೇಳಿದಂತೆ ಬೆಳಿಗ್ಯೆಯಿಂದ ನಡೆದಿರುವ ವಿಚಾರ ತಿಳಿಸುತ್ತಿದ್ದೇನೆ. ಅವಕ್ಕೆ ಹಿಂದಿನ ವಿಚಾರ ಈಗ ಹೇಳುತ್ತಿಲ್ಲ. ಇಂದು ಬೆಳಿಗ್ಯೆ 10 ರಿಂದ ಹನ್ನೆರಡೂವರೆಯವರೆಗೆ ಏನು ನಡೆದಿದೆಯೆಂಬ ವಿವರವನ್ನು ಸಭೆ ಮುಂದಿಡುತ್ತಿದ್ದೇನೆ.

ಶ್ರೀ ಕೆ. ಪ್ರಭಾಕರ್.—ಮಕ್ಕಳ ವಿಚಾರ ಹೇಳಲಿಲ್ಲ. ಅವರಲ್ಲಿ ಎಷ್ಟು ಮಂದಿಗೆ ಏಟು ಬಿದ್ದಿದೆ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಇಲ್ಲಿಗೆ ಬಂದಮೇಲೆ ಒಂದೂವರೆ ಗಂಟೆಯಲ್ಲಿ ನೋಟೀಸ್ ತೋರಿಸಿದರು, ತಕ್ಷಣ ಹೋಂ ಸೆಕ್ರೆಟರಿಗಳಿಗೆ ಇನ್‌ಫರ್ಮೇಷನ್ ಕರೆಕ್ಟ್ ಮಾಡಬೇಕೆಂದು ಹೇಳಿದೆ, ಇನ್ನೂ ಅವರು ಕರೆಕ್ಟ್ ಮಾಡುತ್ತಾ ಇರಬಹುದು. ಅವರು ಕರೆಕ್ಟ್ ಮಾಡಿರುವಷ್ಟು ಇನ್‌ಫರ್ಮೇಷನ್ ಹೇಳಬೇಕೇ ಹೊರತು ಕರೆಕ್ಟ್ ಮಾಡದಿರುವುದನ್ನು ಹೇಗೆ ಹೇಳುವುದು! ಅದಕ್ಕೆ ನಾನು ಸ್ಪಷ್ಟವಾಗಿ ಹೇಳುವುದು ಹನ್ನೆರಡೂವರೆವರೆಗಿನ ಇನ್‌ಫರ್ಮೇಷನ್ ನನ್ನ ಬಳಿ ಇದೆ, ಮುಂದಿನ ಇನ್‌ಫರ್ಮೇಷನ್ ಇಲ್ಲ, ನಾನು ಹೇಳುತ್ತಿರುವುದು ನಡೆದಿರುವ ಘಟನೆ. ನನಗೆ ಬಂದಿರುವ ವರದಿ ಪ್ರಕಾರ ನಡೆದಿರುವ ಘಟನೆಯನ್ನು ವಿನಂತಿಮಾಡುತ್ತಿದ್ದೇನೆ. ಈ ದಿವಸ ಲೆಜಿಸ್ಲೇಚರ್ಸ್ ಹೋಂನಲ್ಲಿ ವಿದ್ಯಾರ್ಥಿ ಸಂಘದ ಕಾರ್ಯಕ್ರಮ ಪಟ್ಟಿ ತಯಾರಾಗುತ್ತಿದೆ, ಬೇಕಾದರೆ ರೂಂ ನಂಬರು ಕೂಡ ಹೇಳುತ್ತೇನೆ.

(ಗರಾಜಿ)

ಶ್ರೀ ಎಚ್. ಎನ್. ನಂಜೇಗೌಡ.—ಅಧ್ಯಕ್ಷರ ಬಗ್ಗೆ ಆಗಲಿ, ಅಧ್ಯಕ್ಷರ ಕಾರ್ಯಾಲಯದ ಬಗ್ಗೆ ಆಗಲಿ ಮಾತನಾಡತಕ್ಕ ಕಾಲದಲ್ಲಿ ಸದಸ್ಯರು ಅಪಾದನೆಗಳನ್ನು ಮಾಡಬಾರದು ಎಂಬುದು ಇರತಕ್ಕ ಸತ್‌ಸಂಪ್ರದಾಯ. ಆ ಸತ್‌ಸಂಪ್ರದಾಯವನ್ನು ಸಭಾನಾಯಕರಾದಂಥವರೇ ಮುರಿದರೆ ಅದು ಸರಿಯಾಗುತ್ತದೆಯೆ ? ಅದಕ್ಕೆ ಅವಕಾಶಕೊಡಬಾರದು. ತಾವು ದಯವಿಟ್ಟು ಅದನ್ನು ವರದಿಯಿಂದ ತೆಗೆಸಿ ಹಾಕಬೇಕು ಎಂಬುದು ನನ್ನ ಕ್ರಿಯಾಲೋಪ ಅದು ವರದಿಯೊಳಗೆ ಇದ್ದರೆ ಸರಿಯಾಗುವುದಿಲ್ಲ ಮತ್ತು ರೂಲ್ಸ್‌ಗೂ ವಿರೋಧವಾಗುತ್ತದೆ, ಸತ್‌ಸಂಪ್ರದಾಯವಾಗುವುದಿಲ್ಲ ಎಂದು ಹೇಳುತ್ತೇನೆ.

Mr. SPEAKER.—If any allegation or defamatory statement is to be made against a member of this House, the procedure is that notice of that should be given to the Speaker and the Minister concerned. But now, as far as I can understand, the Hon. Chief Minister has not made any defamatory statement against any Member of this House. In the Legislature, Members from all sections, whether from the Opposition parties or from the Ruling party, are guided by the Rules of Procedure. Therefore, I do not feel, that the Hon. Chief Minister has made any allegation or defamatory statement against any particular member of this House and hence there is no point of order.

ಶ್ರೀ ವಿ. ಎಸ್. ಶಿವಪ್ಪ.—ಅಲ್ಲಿ ಏನು ನಡೆಯುತ್ತಾ ಇದೆ, ರೂಂ ನಂಬರು ಯಾವುದು ಅಂತ ಎಲ್ಲಾ ಗೊತ್ತಿದೆ ಎಂದು ಹೇಳಿದರು. ಅದನ್ನು ಅವರು ಹೇಳಲೇ ಬೇಕು.

ಶ್ರೀ ಕೆ. ಎಚ್. ರಂಗನಾಥ್.—ಈ ಊರಿನಲ್ಲಿ ಏನು ಆಂಟಿಸೋಷಿಯರ್ ಆಕ್ಟಿವಿಟೀಸ್ ನಡೆಯುತ್ತಾ ಇದೆ ಅದೆಲ್ಲಾ ಲೆಜಿಸ್ಲೇಟರ್ಸ್ ಹೋಂನಲ್ಲೇ ನಡೆಯುತ್ತಿದೆ ಎಂಬ ಆಪಾದನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಆ ಇನ್‌ಫರ್ಮೇಷನ್ ಅವರಿಗೆ ಇದಕ್ಕೆ ಅದರ ಪ್ರತಿಯೊಂದು ರೆಕಾರ್ಡ್‌ನ್ನೂ ಈ ಸಭೆಯ ಮುಂದೆ ಇಡಬೇಕು. ಯಾವ ಅಧಿಕಾರಿ ಅದನ್ನು ವರದಿ ಮಾಡಿದ ? ಪೋಲೀಸ್ ಡಿಪಾರ್ಟ್‌ಮೆಂಟು ಅದನ್ನು ಹೇಗೆ ಕರೆಕ್ಟ್ ಮಾಡಿತು ? ಅದನ್ನು ಕರೆಕ್ಟ್ ಮಾಡಿರತಕ್ಕ ವರು ಯಾರು ಎಂಬ ಎಲ್ಲಾ ರಿಪೋರ್ಟ್‌ನ್ನೂ ಸಭೆಯ ಮುಂದೆ ಇಡಬೇಕು.

Mr. SPEAKER.—I do not know what is happening in the Legislators' Home. I am guided by the Rules of Procedure. The only point I have to consider here is whether what the Hon. Chief Minister stated amounts to an infringement of the Rules of Procedure. I am not concerned with the point as to whether the information is correct or not.

Sri M. S. KRISHNAN (Malleswaram).—On a point of Order. My point of order is under Rule 288. Sub-rules (ii) and (vii) of Rule 22 of the Rules of Procedure states :

" 288. A member while speaking shall not—

(ii) make a personal charge against a member ;

(vii) utter treasonable, seditious or defamatory words. "

As I could understand, these provisions clearly point out that a member including the Hon. Chief Minister who is also an hon. member of this House, should speak in such a manner that it does not reflect on the conduct of the Members of this House. Now the Hon. Chief Minister has stated two things, *viz.*, what is supposed to be happening in the Legislators' Home and what is supposed to be the conduct of Legislators in the Legislators' Home which is a reflection against each and every member of this House who happens to stay at the Legislators Home. And it is a direct remark; not only a direct remark, but it is an insult and derogatory Statement against, the members of the House. Apart from it, he has further stated that he has got enough proof to show from which particular room the so-called conspiracy is hatched to throw stones against the police, etc. So, my submission is, when he has made such a remark, it is totally derogatory act in violation of rule 288 there it must be expunged. There is also another point which I would like to point out. It has been said that students threw stones.....

3-00 P.M.

Mr. SPEAKER.—There cannot be any challenging of facts in a point of order.

Sri M. S. KRISHNAN.—You are not prepared to hear me. How do you say I am challenging him ? The second aspect is the Chief Minister referred to some boys throwing stones. ಅವರು ಹಾಗೆ ಮಾಡಿದರು ಹೀಗೆ ಮಾಡಿದರು, ಕಲ್ಲು ಎಸೆದರು, ಡೆಪ್ಯುಟಿ ಕಮಿಷನ್ನರಿಗೆ ಏಟು ಬಿತ್ತು ಅಂತ ಹೇಳುತ್ತಾರೆಯೇ? ಏನಃ ಇನ್ನೇನೂ ಇಲ್ಲ ವಿದ್ಯಾರ್ಥಿಗಳಿಗೆ ಏಟು ಬಿದ್ದಿದೆ ಅಂತ ನಮಗೆ ಈಗಾಗಲೇ ಗೊತ್ತಾಗಿದೆ. ಒಬ್ಬ ವಿದ್ಯಾರ್ಥಿಗೆ ತಲೆ ಬರುಡೆ ಒಡೆದಿದೆ. ಪಾಠ ನಡೆಯುತ್ತಾ, ಇರಬೇಕಾದರೆ ಪೋಲೀಸಿನವರು ಒಳಗೆ ನುಗ್ಗಿ ಹೊಡೆದಿದ್ದಾರೆ. ಸೆಂಟ್ರಲ್ ಕಾಲೇಜಿನ ಒಳಗೆ ನುಗ್ಗಿ ಪೋಲೀಸಿನವರು ಹೊಡೆದಿದ್ದಾರೆ. ಕೈಕಾಲಿಗೆ ಪೆಟ್ಟು ಬಿದ್ದು ತಲೆ ಬುರುಡೆ ಒಡೆದಿರಬೇಕಾದರೆ, ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದೆ ಹೋದರೆ ಅರ್ಥವೇನು ? ನನಗೆ ಬಂದಿರುವ ವರದಿಯ ಪ್ರಕಾರ ಇಷ್ಟು ಮಾತ್ರ ಹೇಳುತ್ತೇನೆ. ಬೇರೆಯವರಿಗೆ ಏಟು ಬಿದ್ದಿರಬಹುದು. ಹೀಗೆ ವಿದ್ಯಾರ್ಥಿಗಳಿಗೆ ಹೊಡೆದಿದ್ದರೂ ಸಹ ವಿದ್ಯಾರ್ಥಿಗಳೇ ಇದನ್ನೆಲ್ಲಾ ಮಾಡಿದರು ಎಂದು ತಪ್ಪು ಅಭಿಪ್ರಾಯ ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಮತ್ತು ದೇಶವನ್ನು ಮಿಸಲೀಡ್ ಮಾಡುವಂತೆ ಮಾತನಾಡಿದ್ದೀರಿ. ಇದು ಎರಡನೆಯ ಪಾಯಿಂಟ್ ಆಫ್ ಆರ್ಡರ್.

Mr. SPEAKER.—I am sorry the point of order raised by Mr.Nanje Gowda is the same as the one raised by the hon. Member. I have already stated that not reasonable or defamatory statement can be made here. I have also said that he has not made any allegation against anybody. It is possible that persons from outside may do things there. Everybody knows that a lot of persons come there. So far as the record is concerned, I do not find anything defamatory in the statement made by the Hon. Chief Minister. I am sorry hon. Member Sri Krishnan has totally abused the provisions of rule 312.

Sri M. S. KRISHNAN.—I have only controverted what the Chief Minister said.

Mr. SPEAKER.—If hon. Member raise points of order regarding the interpretation of rules or implementation thereof, I can very well appreciate that. Not only that, I would congratulate the Members if they point out a mistake. But then what is being done now is that it is being used for the purpose of challenging facts. The provision of this rule is abused. Hon. Members should remember that if the rule is abused like that, the House will be compelled to take such action as it can under the rules.

Sri M. NAGAPPA (Raichur).—I raise a point of order under rule 288 read with rule 311. Rule 288 (1) says :

> "A member while speaking shall not reflect upon the conduct of persons in high authority unless the discussion is based on a substantive motion drawn in proper terms.
>
> Explanation.–The words 'persons in high authority' mean persons whose conduct can only be discussed on a substantive motion drawn in proper terms under the Constitution or such other persons whose conduct, in the opinion of the Speaker, should be discussed on a substantive motion drawn up in in terms to be approved by him."

Here the words that have been used by the Hon. Chief Minister were: "in your Legislators' Home, this thing is going on". After all, what is that thing that was going on ? According to him, it is a conspiracy. What is that conspiracy ? Conspiracy of an attack by the students on some other persons. So, conspiracy is being formulated in the Legislators' Home which is under the direct charge of a Speaker who is supposed to be the Head of the Legislators Home. Therefore, it is an aspersion and it it is a reflection that is made against the Speaker, and not against the Members of the House. If any reflection is made that you have given permission to such of the Members who are conspiring against the Government, then we come under Section 120 I P.C. including yourself. If you take the Gambling Act, you will find there that the persons who play gambling and the person who gives permission to play gambling in his House are both responsible under the Gambling Act. But as per Section 120 (B) of the Indian Penal Code, the pe rson conspired and the person who gives permission to have such conspiracy both of them are responsible. So, this aspersion which is cast by the Chief Minister is not against us. We are very sorry to say that it is against the Speaker. Hon. Speaker is very well aware of the Constitutional provision that without specific motion, we cannot bring no confidence motion against the Hon. Speaker. But the Hon. Chief Minister intends to discuss your conduct with reference to yoar administration of Legislators' Home. So, you please direct the Hon. Chief Minister to withdraw those words from the proceedings and warn him not to use those words against you. The scales are hanging directly above your head. So, you please not only guide us in matters of rules but also guide the Chief Minister who is supposed to be the Leader of the House and we have to foll ow him. Whatever procedure he adopts, we have to follow him. So, please guide him properly so that we should not take advantage of that statement and use it against you.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಶ್ರೀ ನಾಗಪ್ಪನವರು ಎತ್ತಿರತಕ್ಕ ವಿಷಯ ಈ ಸಭೆಯ ನಾಯಕರಾಗಿರತಕ್ಕ ಮಾನ್ಯ ಮುಖ್ಯಮಂತ್ರಿಗಳು ಸಭಾಧ್ಯಕ್ಷರ ವರ್ತನೆಗೆ ಸಂಬಂಧಪಟ್ಟ ವಿಷಯವನ್ನು ಕುರಿತು ಹೇಳಿರತಕ್ಕದ್ದು. ರೂಲ್ 288ನೇ ಕ್ಲಾಜಿಗೆ ಸಬ್‌ಸ್ಟಾಂಟಿವ್ ಮೋಷನ್ ಬಾರದ ನಿಮ್ಮ ಕಾಂಡಕ್ಟ್ ಬಗ್ಗೆ ನಾವು ದಿನಕಸ್ ಮಾಡುವಹಾಗಿಲ್ಲ ಆದರೆ ನಿಮ್ಮ ವರ್ತನೆಯ ಬಗ್ಗೆ ಅಗೌರವವನ್ನು ಅವರು ಸೂಚಿಸಿದರೂ ಕೂಡ ನೀವು ಬಹಳ ಸಂತೋಷದಿಂದ ನಗುತ್ತಿದ್ದೀರಿ. ಈಗ ಈ ಸಭಾನಾಯಕರು ತಮ್ಮ ಬಗ್ಗೆ ಆಡಿದ ಮಾತು ತಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಹಾಕಿಸಿದೆ. ನೀವೂ ಸಹ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದ್ದೀರಿ. ಸಬ್‌ಸ್ಟ್ಯಾಂಟಿವ್ ಮೋಷನ್ ತಂದು ಪ್ರತ್ಯೇಕವಾಗಿ ಅದರ ಬಗ್ಗೆ ಚರ್ಚೆ ಮಾಡುವ ಪ್ರಶ್ನೆ ಬೇರೆ. ಅವರ ದೃಷ್ಟಿಯಲ್ಲಿ ನಾವು ಒಳಸಂಚು ಮಾಡುವ ಜನರು, ನೀವು ಆ ರೀತಿ ಒಳಸಂಚನ್ನು ಮಾಡಿನಡತಕ್ಕ ಸ್ಪೀಕರ್. ಅತೆಂಬ್ಲಿ ಮೆಂಬರುಗಳಿಗೆ ಸಂಬಂಧಪಟ್ಟ ಲೆಜಿಸ್ಲೇಟರ್ಸ್ ಹೋಂನಲ್ಲಿ ನಮಗೆ ಜಾಗ ಮಾಡಿಕೊಟ್ಟು ನೀವು ಒಳಸಂಚು ಮಾಡಿಸುತ್ತಿದ್ದೀರಿ ಎಂಬುದಾಗಿ ಅವರ ಮಾತಿನಿಂದ ಸ್ಪಷ್ಟವಾಗಿದೆ. ಆದ್ದರಿಂದ ಇದರಲ್ಲಿ ಎರಡು ವಿಷಯಗಳಿವೆ. ಮಾನ್ಯ ಶ್ರೀ ನಾಗಪ್ಪನವರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಅವರ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಅದಕ್ಕೆ ಅವರು ತಯಾರು ಇಲ್ಲದಿದ್ದರೆ ಅವರು ಹೇಳಿರುವ ಮಾತನ್ನು ರಿಕಾರ್ಡಿನಿಂದ ಎಕ್ಸ್‌ಪಂಜ್ ಮಾಡಬೇಕು, ನಿಮ್ಮ ವಿಷಯದ ಬಗ್ಗೆ ತಾವು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದರ ಬಗ್ಗೆ ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಸ್ಪೀಕರ್ ಅವರ ಮೇಲೆ ಆಪಾದನೆ ಮಾಡಿದ್ದಾರೆ ಮತ್ತು ಸದಸ್ಯರ ಮೇಲೂ ಆಪಾದನೆ ಮಾಡಿದ್ದಾರೆ. ಡಿಗ್ನಿಟಿ ಆಫ್ ದಿ ಹೌಸ್ ಏನೆಂಬುದನ್ನು ನಾವು ಉಳಿಸುವ ಕಾಪಾಡಿಕೊಳ್ಳಬೇಕು. ಏಕೆಂದರೆ ಈಗ ತಮ್ಮ ವಿಷಯವನ್ನು ಕುರಿತು ಅವರು ಹೇಳಿದ್ದಾರೆ. ಇದರಲ್ಲಿ ನೀವೂ ಕೂಡ ಸೇರಿದ್ದೀರಿ ಎಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನ್ನ ಕ್ರಿಯಾಲೋಪವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ.....

ಅಧ್ಯಕ್ಷರು.—ಯಾವ ರೂಲ್ ಪ್ರಕಾರ ನಿಮ್ಮ ಕ್ರಿಯಾಲೋಪ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್.—ನಾನು ಯಾವ ರೂಲ್ ಎಂದು ಹೇಳುವುದಕ್ಕೆ ನನ್ನಲ್ಲಿ ಯಾವ ಪಿ. ಎ., ಪಿ. ಎಸ್. ಅಥವಾ ಸೆಕ್ರಟೇರಿಯಟ್ ಇಲ್ಲ. ನನಗೆ ದಯವಿಟ್ಟು ಸ್ವಲ್ಪಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ತಾವು ಹೇಳುವುದು ಯಾವ ರೂಲ್ ಪ್ರಕಾರ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ನನಗೆ ಬಂದಿರತಕ್ಕ ವರದಿಯ ಪ್ರಕಾರ ಹೀಗಾಗಿದೆ ಎಂದು ಹೇಳಿದರು. ಆವರಿಗೆ ವರದಿ ಈಗ ಇಮ್ಮಿಡಿಯೇಟ್ಟಾಗಿ ಕೊಟ್ಟಿರುವವರು ಗೃಹ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಲಕ್ಷ್ಮಣ ರಾವ್ ಅವರು. ಈ ಸಭೆಯಲ್ಲಿ ಯಾವ ರೀತಿಯಾಗಿ ಅವರು ಭಾಷಣಮಾಡಿದ್ದಾರೆ, ಅದರಲ್ಲಿ ಎಷ್ಟು ಸತ್ಯಾಂಶವಿದೆಯೆಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಈಗ ಬಂದಿರತಕ್ಕ ವರದಿ ಪ್ರಕಾರ ಕಲ್ಲಿನ ಸುರಿಮಳೆಯಾಗಿದೆಯೆಂದು.

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರ್ ಯಾವ ರೂಲ್ ಪ್ರಕಾರ ಎಂಬುದನ್ನು ಹೇಳಬೇಕು. ಅವರು ಹೇಳಿದ್ದು ತಪ್ಪು ಇದೆಯೆಂದು ತಾವು ಭಾಷಣ ಮಾಡುತ್ತಿದ್ದೀರಷ್ಟೆ.

ಶ್ರೀ ವಾಟಾಳ್ ನಾಗರಾಜ್.—ನನಗೆ ಭಾಷಣಕ್ಕೆ ಅವಕಾಶವಿಲ್ಲ. ನಾನು ಖಂಡಿತವಾಗಿ ಭಾಷಣ ಮಾಡುತ್ತಾ ಇಲ್ಲ. ತಮಗೆ ಕನ್ನಡ ಪದ ಅರ್ಥವಾಗುತ್ತದೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು.—ನಿಮಗಿಂತಲೂ ಚೆನ್ನಾಗಿ ನನಗೆ ಕನ್ನಡ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಾವು ಹೇಳಿದ್ದನ್ನು ತಾವು ಕೇಳಬೇಕು. ತಾವು ಹೇಳಿದ್ದನ್ನು ಕೇಳಿ ಎಂದು ಹೇಳಿದರೆ ನಾವೂ ಕೇಳುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದೇನೆ. ಆದರೂ ನೀವು ಒಬ್ಬರಿಗೊಬ್ಬರಿಗೆ ತಾರತಮ್ಯವನ್ನು ತೋರಿಸುತ್ತಿದ್ದೀರಿ.

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರ್ ಯಾವ ರೂಲ್ ಪ್ರಕಾರ ಎಂದು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ತಾವು ಗಂಭೀರವಾಗಿ ಹೇಳಿದರೆ ಸಾಕು. ನಾನು ಅದನ್ನು ಹೇಳುತ್ತೇನೆ.

Mr. SPEAKER.—If this kind of thing is indulged in, what am I to do ?

Sri D. DEVARAJ URS.—We want to help you but what do you expect us to do if the Chair goes on allowing this kind of thing. What are the people on the other side doing and what is the Leader of the House doing ?

Mr. SPEAKER.—The entire House should feel about it.

Sri DEVARAJ URS.—As far as the dignity of the House is concerned, I still feel that the Leader of the House is responsible and if he is sitting mum what are we to do ?

Sri VEERENDRA PATIL.—Is it possible without the co-operation of the opposition ?

Sri D. DEVARAJ URS.—What is the co-operation that the Leader of the House wants from us ?

Sri VEERENDRA PATIL.—The Chair is dealing with points of order. When points of order are raised by member after member, I cannot say that they cannot go on raising them and thus waste the time of the House. They will say that it is not a matter for the Leader of the House and that it is a matter for the Chair to decide. For the last half an hour I am watching that this point of order business is going on. Member after member is raising a point of order and repeatedly the Hon. Chair wanted to know under what provision the hon. Member Sri Vatal Nagaraj want to raise it and he is not able to quote the relevant rule.

Sri H. SIDDAVEERAPPA.—We have discussed the draft rules of Procedure for nearly 3½ years ; they may be put into practice. Neither the Leader of the House nor the Speaker is interested in it. What can we do ?

Mr. SPEAKER.—The draft rules are placed before the House ; they are not materially different from the existing rules. The hon. member Sri Channabasappa may, if he has a real point of order, raise it.

Sri H. M. CHANNABASAPPA.—Who said I have a point of order ? Why should the Chair infer that I have a point of order, I fail to understand. What I want to move is a privilege motion.

Sri D. B. KALMANKAR (Aland).—Sir, my point of order is under rule 315. From the statement made by the Hon. Chief Minister it is clear that there is some conspiracy taking place in the Legislators Home and you, Sir, know very well that the members are residing in the Legislators Home. He also said that he could also give the room number. My submission is that it is derogatory to the dignity of the hon. members of this House including the Speaker with whose permission we are there. My submission to the Chair is that under rule 315 these words which not only affect the dignity of the hon. members of this House but also of the Chair, may be ordered to be expunged.

Mr. SPEAKER.—Now many points are raised and some Members along with the rest stand in the dock. Hon. Members might remember that in the past there was an incident which occurred in one of the rooms and later it went to Court and ended in conviction. So rooms are given and it is for members to use them. Neither the member living in the other rooms nor the Chair can be held responsible. Therefore unnecessarily hon. Members need not get excited with certain words uttered by the Chief Minister in a general manner. So I do not think any of the hon. Members are maligned here and therefore there is nothing which can be expunged. There is no force in the points of order raised so far.

Sri H. M. CHANNABASAPPA.—Sir, under rule 177, with your permission, I would like to raise a privilege motion.

Mr. SPEAKER.—If the hon. Member gives it in writing and I shall consider it. Meantime the hon. Minister may continue his statement.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೆಲವರು ಪದೇ ಪದೇ ಹೇಳುತ್ತಿದ್ದಾರೇನೆಂದರೆ, ಪೋಲೀಸರ ಬಗ್ಗೆ ಮಾತ್ರ ಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ, ಹುಡುಗರ ಬಗ್ಗೆ ಏನೂ ಹೇಳುತ್ತಾ ಇಲ್ಲ ಎಂದು. ಅದನ್ನು ತಿಳಿದುಕೊಂಡಮೇಲೆ ನಾನು ರೇಷನ್ಸ್ ಇನ್‌ಫಾರ್ಮೆಷನ್ ತರಿಸುವುದಕ್ಕೆ ಪ್ರಯತ್ನಮಾಡಿದೆ. ಹುಡುಗರು ಕಂಪೌಂಡಿನಿಂದ ಕಲ್ಲುಗಳನ್ನು ತೂರಿದಾಗ, ಪೋಲೀಸರು ಹುಡುಗರನ್ನು ಚದುರಿಸಬೇಕಾಯಿತು. ಹಾಗೆ ಚದುರಿಸುವಾಗ ಹುಡುಗರು ಓಡಿ ಹೋದರು. ಓಡುವಾಗ ಯಾರಿಗೆ ಚಕಮುಕಿಯಾಗಿದೆ ಗಾಯವಾಗಿದೆ ಎಂಬ ವರ್ತಮಾನ ಬಂದಿಲ್ಲ. ಅಂಥ ಗಾಯಗಳು ಆದ ಹುಡುಗರು ಎಲ್ಲಿಯಾದರೂ ಆಸ್ಪತ್ರೆಗಳಲ್ಲಿ ಬಂದರೆ ಅದನ್ನು ನಮಗೆ ರಿಪೋರ್ಟ್ ಮಾಡಬೇಕೆಂದು ಹೇಳಿದ್ದೇವೆ. ಇಲ್ಲಿಯವರೆಗೂ ನಡೆದ ಘಟನೆಯ ಬಗ್ಗೆ ಹೇಳಿದ್ದೇನೆ. ಹೆಚ್ಚು ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. ಬಹುಶಃ ಬೆಳಕು ಬೆಳಕೆಂದು, ಹೇಳಿದ ಹಾಗೆ ಇವತ್ತು ಅನೇಕ ಮಕ್ಕಳಿಗೆ ಈ ಚಳುವಳಿಯಲ್ಲಿ ಆಸಕ್ತಿ ಇಲ್ಲ. ಇದು ಕೆಲವರು ನಡೆಸುವಂತಹ ಚಳವಳಿ, ಮತ್ತು ಈ ಚಳವಳಿ ರಾಜಕೀಯ ಶಕ್ತಿಗಳಿಂದ ಕೆಲಸ ಮಾಡುತ್ತದೆ. ಮಾನ್ಯ ಸಿದ್ಧವೀರಪ್ಪನವರು ಶಾಂತಿ ಯಾವ ರೀತಿಯಿಂದಲಾದರೂ ಕಾಪಾಡಬೇಕೆಂದು ಹೇಳಿದರು. ನಮ್ಮ ಮಕ್ಕಳ ಅತಿಮುಖ್ಯವಾದ 12-15 ದಿವಸ ಇದರಲ್ಲಿ ಕಳೆದು ಹೋಗಿದೆ. ಇದೇ ರೀತಿ ಗರಾಜಿ ಯಾದರೆ, ಯಾವ ಕಾಲೇಜನ್ನೂ ನಡೆಸುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೂ ಕೂಡ ಹೋಮಿನಿಸ್ಟರಾಗಿದ್ದವರು, ಚೆನ್ನಾಗಿ ಇದರಲ್ಲಿ ಅನುಭವ ಇದೆ. ಇದರಲ್ಲಿ ರಾಜಕೀಯ ಕೈವಾಡ ಎಲ್ಲಿಯವರೆಗೆ ದೂರವಾಗುವುದಿಲ್ಲವೋ, ಅಲ್ಲಿಯವರೆಗೆ ಈ ಚಳವಳಿ ಮುಗಿಯುವುದಿಲ್ಲ. ಎಲ್ಲಿಯವರೆಗೆ ನಾನು ಈ ಸ್ಥಾನದಲ್ಲಿರುತ್ತೇನೋ, ಅಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ ಈ ರಾ ಅಂಡ್ ಆರ್ಡರ್ ಮೈಂಟೈನ್ ಮಾಡುವ ಜವಾಬ್ದಾರಿ ಇದೆ ; ನಾನು ಮೈಂಟೈನ್ ಮಾಡುತ್ತೇನೆ. ನಾನು ಯಾವಾಗ ಅದನ್ನು ಮೈಂಟೈನ್ ಮಾಡುವುದಕ್ಕೆ ಅನಮರ್ಥನಾಗುತ್ತೇನೆ, ಆವಾಗ ಈ ಸ್ಥಾನದಲ್ಲಿ ನಾನು ಕೂತುಕೊಳ್ಳುವುದಕ್ಕೆ ಅನಮರ್ಥನಾಗುತ್ತೇನೆ. ನಾನು ಅನೇಕ ಕಡೆ ಹೇಳುತ್ತಿದ್ದೇನೆ—ಏನೆಂದರೆ, ಇವೊತ್ತಿನ ದಿವಸ ನಾವು ಹುಡುಗರನ್ನು ರಾಜಕೀಯಕ್ಕೆ ಬಳಸಬಾರದು ಎಂದು. ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ ಆದ್ದರಿಂದ ನಾನು ಎಲಾ ರಾಜಕೀಯ ಪಕ್ಷಗಳಿಗೂ ಕಳಕಳಿಯಿಂದ ವಿನಂತಿಮಾಡಿಕೊಳ್ಳುವುದೇನೆಂದರೆ, ನಮ್ಮ ಮಕ್ಕಳಿಗೆ ಈ ಚಳವಳಿ ಸಾಕು, ಎಲ್ಲರೂ ಕ್ಲಾಸಿಗೆ ಹೋಗಿ ಎಂದು ಉಪದೇಶ ಮಾಡಿದರೆ ಎಲ್ಲಾ ನರಿ ಹೋಗುತ್ತದೆ. ಇದರಿಂದ ನಾಳೆಯೇ ತಕ್ಷಣ ಪೂರ್ತಿ ಈ ಚಳವಳಿ ನಿಲ್ಲುವ ಭರವಸೆ ನನಗೆ ಇದೆ. ಇಷ್ಟು ಮಾತ್ರ ನಾನು ಹೇಳಬಯಸುತ್ತೇನೆ.

3-30 P. M.

†ಶ್ರೀ ಡಿ. ದೇವರಾಜ್ ಅರಸ್.—ಸ್ಪೀಮ್, ಶ್ರೀಮಾನ್ ವೀರೇಂದ್ರ ಪಾಟೀಲರು ಇದುವರೆಗೂ ಹೇಳಿದ ವಿಚಾರವನ್ನು ನಾನು ಕೇಳಿದ್ದೇನೆ. ನಾನು ಈಗ ಹೆಚ್ಚಿಗೆ ಭಾಷಣ ಮಾಡುವ ಸಮಯವಲ್ಲದಿದ್ದರೂ ಕೂಡ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ನಾನು ತಿಳಿದಿದ್ದೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ರೂಪವಾಗಿ ಏನು ನಡೆದಿವೆ, ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಅಫಿಷಿಯಲ್ ಆಗಿ ಏನು ಇನ್‌ಫರ್‌ಮೆಷನ್ ಇದೆಯೋ ಅದನ್ನು ಈ ಸಭೆಯ ಮುಂದೆ ನಮ್ಮ ಪಾರ್ಟಿಯ ನಾಯಕರಾದ ಶ್ರೀಮಾನ್ ಸಿದ್ಧವೀರಪ್ಪನವರು ಎತ್ತಿದಂತಹ ಪ್ರಶ್ನೆಗೆ ಉತ್ತರ ರೂಪವಾಗಿ ಕೊಡುತ್ತಾರೆ ಎಂದು. ಅದನ್ನು ಅವರು ಕೊಡುವ ಸಂದರ್ಭದಲ್ಲಿ ಕೆಲವು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ಈಗ ಒಂದೆರಡು ಮಾತುಗಳನ್ನು ಹೆಚ್ಚು ಹೇಳಬೇಕಾಗಿ ಬರುತ್ತದೆ. ಕೇವಲ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಉತ್ತರವನ್ನು ಹೇಳಬೇಕಾಗಿಲ್ಲ. ಈಗ ನಾನು ಹೇಳಬೇಕಾದ ವಿಚಾರ ಏನೆಂದರೆ ಇವೊತ್ತು ನಡೆದಂತಹ ಘಟನೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ವಿದ್ಯಾರ್ಥಿಗಳು ಮತ್ತು ಇತರರು ಯಾರೋ ಕಾಲೇಜಿನ ಒಳಗಡೆ ನಿಂತುಕೊಂಡು ರಸ್ತೆಯಲ್ಲಿ ಹೋಗುವಂತಹ ವಾಹನಗಳಿಗೆ ಕಲ್ಲನ್ನು ಎಸೆದರು, ವಾಹನಗಳಿಗೆ ಡ್ಯಾಮೇಜ್ ಮಾಡಿದ್ದಾರೆ. ಅವನ್ನು ತಪ್ಪಿಸಬೇಕಾದ್ದು ಪೋಲೀಸಿನವರ ಕರ್ತವ್ಯ ಎನ್ನುವ ದೃಷ್ಟಿಯಿಂದ ಅವರು ಕಾಲೇಜಿನ ಒಳಗಡೆ ಹೋಗುವುದಕ್ಕೆ ಕಾಲೇಜಿನ ಪ್ರಿನ್ಸಿಪಾಲರ ಪರ್ಮಿಷನ್ ತೆಗೆದುಕೊಂಡು ಕಾಲೇಜಿನ ಒಳಗಡೆ ಹೋಗಿ ಅಲ್ಲಿದ್ದಂತಹ ಗುಂಪನ್ನು ಚದುರಿಸುವುದಕ್ಕೆ ಪೋಲೀಸಿನವರು ಪ್ರಯತ್ನಮಾಡಿದ್ದಾರೆ ಎಂದು ಹೇಳಿದರು. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ರಾ ಅಂಡ್ ಆರ್ಡರನ್ನು ಮೆಂಟೇನ್ ಮಾಡುವುದು ಸರ್ಕಾರದ ಜವಾಬ್ದಾರಿ. ಎಲ್ಲಿಯವರೆಗೆ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿರುತ್ತಾರೆಯೋ ಅಲ್ಲಿಯವರೆಗೂ ಅವರು ಅದರ ಜವಾಬ್ದಾರಿಯನ್ನು ನಂಪೂರ್ಣ ನಿರ್ವಹಣೆ ಮಾಡಬೇಕು. ನಾವು ಅದನ್ನು ಸಂಪೂರ್ಣವಾಗಿ

ಒಪ್ಪುತ್ತೇವೆ. ಯಾರೇ ಸರ್ಕಾರವನ್ನು ನಡೆಸಿದರೂ ಕೂಡ ರಾ ಅಂಡ್ ಆರ್ಡರನ್ನು ಮೆಂಟೇನ್ ಮಾಡ ತಕ್ಕದ್ದು ಅವರ ಪ್ರಥಮ ಕರ್ತವ್ಯ. ಯಾವ ಸರ್ಕಾರವೇ ಇರಲಿ ಅವು ಆ ಕೆಲಸವನ್ನು ಮಾಡಿವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ, ಸರ್ಕಾರಕ್ಕೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಅದು ಏನೆಂದರೆ ಪೋಲೀಸಿನವರು ಅಕ್ರಮವಾಗಿ ಜನಗಳಿಗೆ ಹಿಂಸೆಯನ್ನು ಕೊಡುವುದು ಮತ್ತು ಹಿಂಸಾ ಕೃತ್ಯಗಳನ್ನು ನಿಲ್ಲಿಸುವ ಒಂದು ಸೋಗಿನಲ್ಲಿ, ಕಲ್ಲನ್ನು ಎಸೆಯುವುದನ್ನು ತಪ್ಪಿಸುವ ಸೋಗಿನಲ್ಲಿ ನ್ಯಾಯಬದ್ಧವಾಗಿ ನಡೆಯುತ್ತಾ ಇರತಕ್ಕ ಚಳುವಳಿಯನ್ನು ನಿಲ್ಲಿಸುವ ಸಲುವಾಗಿ ಅವರನ್ನು ಹಿಂಸೆ ಮಾಡುವುದಕ್ಕೆ ಹೋಗುವುದಾಗಲೀ, ಹೊಡೆಯುವುದಕ್ಕೆ ಹೋಗುವುದಾಗಲೀ, ರಾರಿ ಪ್ರಹಾರವನು ಮಾಡತಕ್ಕದ್ದಾಗಲೀ ಯಾವ ಕಾನೂನಿನಲ್ಲಿ ಇದೆಯೆಂಬುದು ನನಗೆ ಗೊತ್ತಿಲ್ಲ. ಎಲ್ಲಿಯವರೆಗೆ ಕಾನೂನು ಬದ್ಧವಾಗಿ ಯಾವ ಕಾರ್ಯಕ್ರಮಗಳನ್ನು ನಡೆಸುತ್ತಾರೆಯೋ ಆಂಥವರ ಮೇರೆ ಪೋಲೀಸಿನವರು ದಬ್ಬಾಳಿಕೆಯನ್ನು ಮಾಡುವುದಾದರೆ ಮತ್ತು ಕಾಲೇಜಿನ ಒಳಗಡೆ ಇದ್ದಂತಹ, ಪಾಠ ನಡೆಯುತ್ತಾ ಇದ್ದಂತಹ ಕಡೆ ಪೋಲೀಸಿನವರು ಹೋಗಿ ಹುಡುಗರನ್ನು ಮತ್ತು ಉಪಾಧ್ಯಾಯರನ್ನೂ ಹೆದರಿಸಿ ದಬ್ಬಾಳಿಕೆಯನ್ನು ಮಾಡುವ ಪ್ರಸಂಗವಾದ್ದು ಎಲ್ಲಿಯವರೆಗೆ ನಡೆಯುತ್ತದೆಯೋ ಅಲ್ಲಿಯವರೆಗೆ ಸಾರ್ವಜನಿಕರ ಪ್ರತಿನಿಧಿಗಳಿಗಾಗಿ, ಎದುರು ಪಕ್ಷದಲ್ಲಿ ನಾವು ಕೆಲಸ ಮಾಡುವವರೆಗೆ ಇಂಥಾ ಕೃತ್ಯಗಳನ್ನು, ದಬ್ಬಾಳಿಕೆಗಳನ್ನು ಸರ್ಕಾರವಾಗಲೀ, ಪೋಲೀಸಿನವರಾಗಲೀ ನಡೆಸುವುದಕ್ಕೆ ನಾವು ಅವಕಾಶವನ್ನು ಕೊಡುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಕಾಲೇಜಿನ ಒಳಗಡೆ ಕ್ಲಾಸುಗಳು ನಡೆಯುತ್ತಾ ಇದ್ದಾಗ ಪಾಠಗಳು ನಡೆಯುತ್ತಾ ಇದ್ದಂತಹ ಕಾಲದಲ್ಲಿ ಪೋಲೀಸಿನವರು ಒಳಗಡೆ ನುಗ್ಗಿ ಹುಡುಗರನ್ನೂ ಉಪಾಧ್ಯಾಯರನ್ನೂ ಹೆದರಿಸಿರತಕ್ಕ ವರ್ತಮಾನ ನಮಗೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಅಫಿಷಿಯಲ್ ಆಗಿ ಏನು ವರ್ತಮಾನ ಬಂದಿದೆ ಅದನ್ನು ಅವರು ಈ ಸಭೆಯ ಮುಂದೆ ಇಟ್ಟಿದ್ದಾರೆ. ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ ನಮಗೆ ಸರಿಯಾದಂತಹವರಿಂದ ವರ್ತಮಾನ ಬಂದಿದೆ, ಇದು ಗಾಳಿ ವರ್ತಮಾನವಲ್ಲ. ನಾನು ರಾಜಕೀಯ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಎಂದು ತಾವು ತಿಳಿಯುವುದಿಲ್ಲ ಎಂದು ನಾನು ನಂಬುತ್ತೇನೆ. ಯಾರೋ ಹಾವಿ ಬೀದಿಯಲ್ಲಿ ಹೋಗ ತಕ್ಕಂಥ ಜನಗಳು ಹೇಳಿದಂತಹ ವಿಚಾರಗಳನ್ನು ಕೇಳಿ ನಾನು ಇದನ್ನು ಹೇಳುತ್ತಿದ್ದೇನೆ ಎಂದು ತಾವು ತಿಳಿಯಬಾರದು. ಅಲ್ಲೇ ಸ್ಥಳದಲ್ಲೇ ಇದ್ದಂತಹವರು ಹೇಳಿದಂತಹ ವಿಷಯ ಇದು. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಏನು ಮನವಿ ಮಾಡಿದ್ದಾರೆ ಎಂದರೆ ಇದಕ್ಕೆ ರಾಜಕೀಯ ಹಿನ್ನೆಲೆ ಇದೆ. ಎಲ್ಲರೂ ಎಲ್ಲಾ ರಾಜಕೀಯ ಪಕ್ಷಗಳು ಸೇರಿ ಶಾಲೆಗೆ ಹೋಗಿ ಎಂದು ವಿದ್ಯಾರ್ಥಿಗಳಿಗೆ ಮನವಿ ಮಾಡಿದ್ದರೆ ಈ ರೀತಿ ಚಳುವಳಿ ನಡೆಯುತ್ತಾ ಇರಲಿಲ್ಲ ಎಂದು ಹೇಳಿದರು. ಅವರು ಆ ಮಾತು ಹೇಳಿರುವುದರಿಂದ ನಾನು ಜವಾಬು ಹೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಹೇಳಬಾರದಾಗಿತ್ತು. ಇದರಲ್ಲಿ ಯಾವರೀತಿ ರಾಜಕೀಯ ಇದೆಯೆಂದು ಅವರು ತಿಳಿದುಕೊಂಡಿದ್ದಾರೆಯೋ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಸ್ಪಷ್ಟ ಮಾಡಬೇಕಾದ ವಿಚಾರ ಏನೆಂದರೆ ಈ ರೀತಿ ಕಾಲೇಜು ವಿದ್ಯಾರ್ಥಿಗಳು ಕ್ಲಾಸಿಗೆ ಹೋಗದೆ ಪಾಠ ಪ್ರವಚನವನ್ನು ಕಳೆದುಕೊಳ್ಳಬೇಕು ಎಂಬ ಅಭಿಲಾಷೆ ನಮಗೆ ಇಲ್ಲ. ಈ ಮುಷ್ಕರ ಮುಂದುವರಿಯಬೇಕು, ಕಲ್ಲು ಎಸೆಯಬೇಕು ಎನ್ನುವ ಅಭಿಲಾಷೆಯುಳ್ಳವರು ನಾವಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ಶಾಂತಿಯುತವಾಗಿ ಕಾನೂನು ರೀತ್ಯಾ ಯಾರಾದರೂ ಚಳುವಳಿ ನಡೆಸಿದರೆ ಮುಖ್ಯ ಮಂತ್ರಿಗಳಾಗಲೀ, ಸರ್ಕಾರ ವಾಗಲೀ ಕಾನೂನಿಗೆ ವಿರೋಧವಾಗಿ ಆ ಚಳುವಳಿಗೆ ಭಂಗ ತರತಕ್ಕದ್ದನ್ನು ಪ್ರಜಾ ಪ್ರಭುತ್ವದಲ್ಲಿ ನಾವು ಮೆಚ್ಚುವುದಕ್ಕೆ ಸಾಧ್ಯವಿಲ್ಲ. ಈಗ ನಡೆದಿರತಕ್ಕ ಘಟನೆಯ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ತಿಳಿದು ನಮ್ಮ ಮುಂದೆ ಇಟ್ಟಿಲ್ಲ. ಕೇವಲ ಪೋಲೀಸಿನವರು ಏನು ಹೇಳುತ್ತಾರೆಯೋ ಅದನ್ನು ಮಾತ್ರ ಹೇಳಿದ್ದಾರೆ. ಪೋಲೀಸಿನವರು ಹೇಳಿದ್ದೇ ಸರಿಯಲ್ಲ. ಈಗ ನಾಲ್ಕು ದಿವಸಗಳಿಂದಲೂ ಏನೇನು ನಡೆಯುತ್ತಾ ಇವೆ ಎನ್ನುವ ಬಗ್ಗೆ ನಮಗೆ ವರ್ತಮಾನ ಬರುತ್ತಿದೆ. ಈಗ ಇಲ್ಲಿ ಸರ್ಕಾರವನ್ನು ನಡೆಸತಕ್ಕ ಕಾಂಗ್ರೆಸ್ ಪಕ್ಷದ ಪ್ರೆಸಿಡೆಂಟರಾದ ಶ್ರೀ ನಾಗಪ್ಪಾ ಆಳ್ವಾ ಅವರ ಸಂಬಂಧಿ ಎಂದು ಹೇಳತಕ್ಕ ಒಬ್ಬ ಪೋಲೀಸ್ ಅಧಿಕಾರಿ ಎಲ್ಲರ ಮೇಲೂ ದಬ್ಬಾಳಿಕೆಯನ್ನು ನಡೆಸಿ ಅಕ್ರಮವಾಗಿ ಹುಡುಗರನ್ನು ಪೋಲೀಸ್ ಠಾಣೆಯೊಳಕ್ಕೆ ಎಳೆದು ಕೊಂಡು ಹೋಗಿ ಹೊಡೆದಿದ್ದಾರೆ ಎನ್ನುವ ವರ್ತಮಾನ ನಮಗೆ ಬಂದಿದೆ. ಸರ್ಕಾರಿ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಮತ್ತು ರಾ ಕಾಲೇಜ್ ಆವರಣದಲ್ಲಿ ಪೋಲೀಸಿನವರು ವಿದ್ಯಾರ್ಥಿಗಳನ್ನು ಹೊಡೆದಿದ್ದಾರೆ. ಈ ರೀತಿ ದಬ್ಬಾಳಿಕೆಯನ್ನು ನಡೆಸತಕ್ಕ ಪೋಲೀಸ್ ಅಧಿಕಾರಿ ಯಾರು ಎಂದರೆ ಶೇಷಾದ್ರಿಪುರಂ ಪೋಲೀಸ್ ಸ್ಟೇಷನ್ನಿಗೆ ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್. ಅವರ ಹೆಸರು ಆಳ್ವ ಎಂದು. ಅವರು ವಿಪರೀತ ದಬ್ಬಾಳಿಕೆಯನ್ನು ನಡೆಸುತ್ತಿದ್ದಾರೆ. ಅವರು ವಿದ್ಯಾರ್ಥಿಗಳನ್ನು ಪೋಲೀಸ್ ಠಾಣೆಗೆ ಎಳೆದುಕೊಂಡು ಹೋಗಿ ಅವರನ್ನು ಅಟ್ಟಿಸುಕೊಂಡು ಅಕ್ರಮವಾದ ರೀತಿಯಲ್ಲಿ ಅವರನ್ನು ಹೊಡೆದು

(ಶ್ರೀ ಡಿ. ದೇವರಾಜ ಅರಸ್)

ಹೀನಾಮಾನವಾಗಿ ಬೈಯ್ದುದ್ದಾರೆ. ಹುಡುಗರನ್ನು ಯಾವುದೋ ಒಂದು ಗಲೀಜು ರೂಮಿನಲ್ಲಿ ಖೈದಿಗಳೋಪಾದಿಯಲ್ಲಿ ದಬ್ಬಿದ್ದಾರೆ. ಮೊನ್ನೆ ಕೆಲವು ಹುಡುಗರು ರೆಜಿಸ್ಟ್ಲೇಟರ್ಸ್ ಹೋಮಿನಲ್ಲಿ ಕ್ಯಾಂಟೀನ್ ಮುಚ್ಚಿ ಎಂದು ಹೇಳಿದ್ದಕ್ಕೆ ಅವರನ್ನು ಪೋಲೀಸಿನವರು ಎಳೆದುಕೊಂಡು ಹೋಗಿ ಹೊಡೆದಿದ್ದಾರೆ. ನಾವು ಕ್ಯಾಂಟೀನಲ್ಲಿ ವಿಚಾರ ಮಾಡಿದ್ದೇವೆ. ಆ ಕ್ಯಾಂಟೀನಿನ ಮ್ಯಾನೇಜರ್ ಬರವಣಿಗೆಯಲ್ಲಿ ಕೂಡ ನಮಗೆ ಕೊಟ್ಟಿದ್ದಾರೆ, ಹುಡುಗರು ಯಾರೂ ಅಲ್ಲಿಗೆ ಬಂದವರು ಗಲಾಟೆ ಮಾಡಲಿಲ್ಲ, ನೀವು ಕ್ಯಾಂಟೀನನ್ನು ಮುಚ್ಚಿದರೆ ಒಳ್ಳೆಯದು ಎಂದು ಹೇಳಿದರು ಎಂದು ನಮಗೆ ಬರೆದು ಕೊಟ್ಟಿದ್ದಾರೆ. ಈ ರೀತಿಯಾಗಿ ರೆಜಿಸ್ಟ್ಲೇಟರ್ಸ್ ಹೋಮಿನಲ್ಲಿರತಕ್ಕ ಪೋಲಿಸಿನವರು ಹುಡುಗರನ್ನು ಹೊಡೆದಿದ್ದಾರೆ. ಮುಖ್ಯ ಮಂತ್ರಿಗಳೇ ಗೃಹಮಂತ್ರಿಗಳೂ ಆಗಿದ್ದಾರೆ. ಆದ್ದರಿಂದ ಪೋಲೀಸ್ ಅಧಿಕಾರಿಗಳು ನಡೆಸತಕ್ಕ ದಬ್ಬಾಳಿಕೆಯನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ. ಅವರು ಇದನ್ನು ದಯವಿಟ್ಟು ರಾಜಿನಬೇಕು, ಗಮನಿಸಬೇಕು, ಇಂಥಾ ಅಧಿಕಾರಿಗಳಿಗೆ ಅವರು ಪ್ರತ್ಯಕ್ಷವಾಗಿ ಕರೆಸಿ ಸೂಕ್ತ ಡೈರೆಕ್ಷನ್ ಕೊಡಬಿದ್ದರೆ ನಾವೂ ಕೂಡ ಪೋಲೀಸ್ ಅಬ್ಬಾಳಿಕೆಯನ್ನು ಸಹಿಸುವುದಕ್ಕೆ ಸಾಧ್ಯ ವಿಲ್ಲ ಎಂದು ನಾನು ತಮ್ಮ ಮೂಲಕ ಅರಿಕೆ ಮಾಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎಂ. ಚೆನ್ನಬಸಪ್ಪ (ಪಿರಿಯಾಪಟ್ಟಣ).—ಸ್ಪೀಕರ್, ನಾನು ಕೂಡ ಎರಡು ಮೂರು ವಿಷಯಗಳನ್ನು ಕೇಳಬೇಕಾಗಿದೆ. ವಿದ್ಯಾರ್ಥಿಗಳ ಚಳುವಳಿಯ ಬಗ್ಗೆ ಇದುವರೆಗೆ ಏನೇನು ನಡೆದಿದೆ, ಆ ರೀತಿಯೆಲ್ಲಾ ನಡೆದಿರುವುದಕ್ಕೆ ಕೆಲವರು ಸೇರಿಕೊಂಡು ರೆಜಿಸ್ಟ್ಲೇಟರ್ಸ್ ಹೋಮ್‌ನಲ್ಲಿ ಕಾನ್‌ಸ್ಪಿರೆಸಿ ನಡೆಸಿರುವುದೇ ಕಾರಣ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆ ರೀತಿ ಯಾರಾದರೂ ಕಾನೂನಿಗೆ ವಿರುದ್ಧವಾಗಿ ಚಳುವಳಿಯ ಬಗ್ಗೆ ಕಾರ್ಯಕ್ರಮವನ್ನು ರಚನೆ ಮಾಡಿದ್ದರೆ ಯಾರು ಯಾರು ಸೇರಿಕೊಂಡು ಮಾಡಿದ್ದರು, ಎಂಬ ವಿವರಗಳು ಸರ್ಕಾರದ ಹತ್ತಿರ ಇದ್ದರೆ ಅದನ್ನು ಸ್ಪಷ್ಟವಾಗಿ ಸಭೆಯ ಮುಂದೆ ಇಡಬೇಕು. ಆ ರೀತಿ ಸಭೆಯ ಮುಂದೆ ಇಡುವುದಕ್ಕೆ ಮುಖ್ಯಮಂತ್ರಿಗಳು ನಿಷ್ಪಲರಾದರೆ ಮುಖ್ಯ ಮಂತ್ರಿಗಳು ಬೇಜವಾಬ್ದಾರಿಯಿಂದ ಸ್ಟೇಟ್‌ಮೆಂಟ್ ಮಾಡಿದ್ದಾರೆಂದು ಅರ್ಥವಾಗುತ್ತದೆ. ಅದಕ್ಕಾಗಿ ಅವರು ಸಭೆಯ ಕ್ಷಮಾಪಣೆಯನ್ನು ಕೇಳಬೇಕು. ಎಲ್ಲ ಪಕ್ಷಗಳವರೂ ಸೇರಿಕೊಂಡು ಚಳುವಳಿಯನ್ನು ನಿಲ್ಲಿಸಬೇಕೆಂದು ವಿದ್ಯಾರ್ಥಿಗಳಲ್ಲಿ ವಿನಂತಿ ಮಾಡಿಕೊಂಡರೆ ಚಳುವಳಿ ನಿಂತು ಹೋಗುತ್ತದೆಂದು ಮುಖ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಆ ರೀತಿ ಸ್ಟೇಟ್‌ಮೆಂಟ್ ಮಾಡಬೇಕಾದರೆ ಅದಕ್ಕೆ ಏನಾದರು ಆಧಾರವಿರಬೇಕು. ಆಧಾರ ಎಂದರೆ ಇಂತಿಂಥ ಪಾರ್ಟಿಗಳವರು ಇಂತಿಂಥ ಕಾಲದಲ್ಲಿ ಇಂಥಿಂಥ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡಿ ಅವರ ಕಾರ್ಯಕ್ರಮಕ್ಕೆ ರೂಪುಕೊಡುತ್ತಿದ್ದಾರೆಂದು ಅರ್ಥ ಬರುತ್ತದೆ. ಯಾವ ಯಾವ ಪಾರ್ಟಿಯವರು ಆ ರೀತಿ ಪ್ರಚೋದನೆ ಮಾಡಿದ್ದಾರೆ ಮತ್ತು ಬೆಂಬಲ ಕೊಟ್ಟಿದ್ದಾರೆಂಬ ಬಗ್ಗೆ ಇರುವ ಸ್ಟೇಟ್‌ಮೆಂಟ್‌ನ್ನು ಸಭೆಯ ಮುಂದಿಡಬೇಕು. ಈ ಬಗ್ಗೆ ಯಾವ ಮೆಟೀರಿಯಲ್ಸ್ ಕೂಡ ಸರ್ಕಾರದ ಬಳಿ ಇಲ್ಲ ಎಂದು ಹೇಳುವುದಾದರೆ ಮುಖ್ಯಮಂತ್ರಿಗಳು ಸಭೆಯ ಕ್ಷಮಾಪಣೆ ಕೇಳಬೇಕು. ನಿಜವಲ್ಲದ ಸ್ಟೇಟ್‌ಮೆಂಟ್ ಮಾಡಿದ್ದಕ್ಕೆ ಸಭೆಗೆ ಕ್ಷಮಾಪಣೆ ಕೇಳಬೇಕು. ಇಲ್ಲದಿದ್ದರೆ ಆ ಸ್ಥಾನ ಬಿಟ್ಟು ಹೋಗಬೇಕು. ಹುಡುಗರು ತಪ್ಪುಮಾಡಿದರೆಂಬ ಕಾರಣದಿಂದ ಪೋಲೀಸರು ಸ್ಕೂರ್ ಒಳಗೆ ಹೋಗಿ ಉಪಾಧ್ಯಾಯರನ್ನು ಸಹ ಹೊಡೆದಿರುವುದು ನಿಜವೇ ಅಥವಾ ಇಲ್ಲವೇ ಎಂಬುದನ್ನು ಈಗ ಸ್ಪಷ್ಟಪಡಿಸಬೇಕು. ಈ ಬಗ್ಗೆ ನಮಗೆ ಸಾರ್ವಜನಿಕರಿಂದ ತಿಳಿವಳಿಕೆ ಬಂದಿದೆ. ಸರ್ಕಾರಕ್ಕೆ ತಿಳಿವಳಿಕೆ ಬಂದಿಲ್ಲದಿದ್ದರೆ ಯಾವ ಕಾರಣಕ್ಕೋಸ್ಕರ ಬಂದಿಲ್ಲ ಎಂಬುದನ್ನು ತಿಳಿಸಬೇಕು. ಪೋಲೀಸರು ಉಪಾಧ್ಯಾಯರನ್ನು ಹೊಡೆದಿದ್ದರೆ ಅದು ಅಪರಾಧವಲ್ಲವೇ? ಉಪಾಧ್ಯಾಯರೇ ಪೋಲೀಸರ ಮೇಲೆ ಕಲ್ಲನ್ನು ಎಸೆಯುವುದಕ್ಕೆಹೋಗಿದ್ದರೇ ಎಂಬುದನ್ನು ಸಹ ತಿಳಿಸಬೇಕು ಚಳುವಳಿಯ ಬಗ್ಗೆ ರೆಜಿಸ್ಟ್ಲೇಚರ್ ಹೋಮ್‌ನಲ್ಲಿ ಇಂತಿಂಥ ರೂಮುಗಳಲ್ಲಿ ಕಾರ್ಯಕ್ರಮ ತಯಾರಾಗಿದೆ ಎಂಬತಕ್ಕಂಥ ಗುರುತರವಾದ ಆಪಾದನೆಯನ್ನು ಹೊರಿಸುವ ಮೂಲಕ ಈ ಮಾನ್ಯ ಸಭೆಯಲ್ಲಿ ಒಂದು ಡ್ಯಾಮೇಜ್ ಸ್ಟೇಟ್‌ಮೆಂಟನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ರೆಜಿಸ್ಟ್ಲೇಚರ್ ಹೋಮ್ ತಮ್ಮ ಆಧೀನದಲ್ಲಿದೆ. ಅಲ್ಲಿ ನಡೆಯತಕ್ಕಂಥ ಅಕ್ರಮಗಳಿಗೆ ರೆಜಿಸ್ಟ್ಲೇಟಿವ್ ಡಿಪಾರ್ಟ್‌ಮೆಂಟ್ ಜವಾಬ್ದಾರಿ. ಇಂತಹ ಅಕ್ರಮಗಳು ಅಲ್ಲಿ ನಡೆದಿವೆ ಎಂದು ನಿಮಗೆ ತಿಳಿದುಬಂದಾಗ ಗೃಹ ಮಂತ್ರಿಗಳೂ ಕೂಡ ಆಗಿರುವ ನೀವು ಏತಕ್ಕೆ ಸಭೆಯ ಅಧ್ಯಕ್ಷರಿಗೆ ತಿಳಿಸಿ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಕೇಳುತ್ತೇನೆ. Setting up people against maintenance of law and order is a serious offence under the I.P.C. What was the Government doing ? Why did they

not book the concerned persons wherever they may be ? What action was initiated so far by the Government in order to book those who have been responsible for the conspiracy ? It is also one of the duties of the Chief Minister or the Home Minister to write to the concerned authority that such a conspiracy is going on in such and such a room of the Legislators' Home ; he shoud have made a request in writing to prevent it or to enable him to take action under the I.P.C. Has the Chief Minister done that ? Let the Chief Minister enlighten us. ಈ ಎಲ್ಲ ವಿಷಯಗಳ ಬಗ್ಗೆ ತಾವು ಇಲ್ಲ ಬೇಜವಾಬ್ದಾರಿಯಿಂದ ಸ್ಟೇಟ್‌ಮೆಂಟ್‌ನ್ನು ಈಗ ಮಾಡಿದ್ದೀರಿ. ನೀವು ಹೇಳಿದ್ದು ಸರಿಯಾಗಿದ್ದರೆ ಎಲ್ಲ ವಿವರಗಳನ್ನು ಸಭೆಯ ಮುಂದೆ ಇಡಬೇಕು. ಇಲ್ಲದಿದ್ದರೆ ಕಾನೂನುಬದ್ಧವಾಗಿ ನಿಮ್ಮ ಮೇಲೆ ನಾವು ಕೂಡ ಕ್ರಮ ತೆಗೆದುಕೊಳ್ಳಬೇಕಾಗಿ ಬರುತ್ತದೆ. ಆದ್ದರಿಂದ ಈ ಎಲ್ಲ ಪ್ರಶ್ನೆಗಳಿಗೂ ಕೂಡ ವಿವರಣೆ ಕೊಡಬೇಕೆಂದು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಮುಖ್ಯ ಮಂತ್ರಿಗಳು ವಿದ್ಯಾರ್ಥಿ ಚಳುವಳಿಯ ಬಗೆ ಸ್ಟೇಟ್‌ಮೆಂಟ್ ಮಾಡುತ್ತಾ ವಿದ್ಯಾರ್ಥಿಗಳು ಪೋಲೀಸ್ ಸಿಬ್ಬಂದಿಯಮೇಲೆ ಮತ್ತು ಪೋಲೀಸ್ ವ್ಯಾನ್ ಮೇಲೆ ಕಲ್ಲನ್ನು ಹೊಡೆದಿದ್ದಾರೆ ಎಂದು ಹೇಳಿದರು. ಆ ಕಾಲೇಜಿನ ಸುತ್ತ ಇರತಕ್ಕ 4 ರಸ್ತೆಗಳಲ್ಲಿ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ವ್ಯಾನುಗಳು ಇದ್ದವು ಯಾವ ಯಾವ ಪೋಲೀಸ್ ಅಧಿಕಾರಿಗಳು ಯಾವ ಯಾವ ಕೆಲಸದಮೇಲೆ ಅಲ್ಲಿ ಇದ್ದರು ಸ್ಟೇಟ್‌ಮೆಂಟಿನಲ್ಲಿ ವಿವರ ಕೊಡಬೇಕು. ವಿದ್ಯಾರ್ಥಿಗಳು ಕಾಲೇಜಿನ ಒಳಗಡೆಯಿಂದ ಕಲ್ಲನ್ನು ಎಸೆದಿದ್ದರೆ ಕಾಲೇಜಿನೊಳಗೆ ಕಲ್ಲಿನ ರಾಶಿ ಇತ್ತೇ, ಇದ್ದರೆ ಆ ರೀತಿ ರಾಶಿ ಇಟ್ಟುಕೊಳ್ಳಬಾರದೆಂದು ಸಂಬಂಧಪಟ್ಟ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಹೇಳಲಿಲ್ಲವೆ ಎಂಬುದನ್ನು ತಿಳಿಸಬೇಕು. ಅಲ್ಲಿ ಬಿಲ್ಡಿಂಗ್ ಕಟ್ಟುವುದಕ್ಕೋಸ್ಕರ ಏನಾದರೂ ಕಲ್ಲಿನ ರಾಶಿ ಇತ್ತೇ ಎಂಬುದನ್ನು ಸಹ ತಿಳಿಸಬೇಕು. ಇವತ್ತಿನ ಗಲಾಟೆಯಲ್ಲಿ ಎಷ್ಟುಜನ ವಿದ್ಯಾರ್ಥಿಗಳು ಗಾಯಗೊಂಡರು ಎಂಬುದನ್ನು ಸಹ ತಿಳಿಸಬೇಕು. ಏಕೆಂದರೆ ಗಾಯಗೊಂಡ ವಿದ್ಯಾರ್ಥಿಗಳು ಆಸ್ಪತ್ರೆಗೆ ಹೋದರೆ ಬ್ಯಾಂಡೇಜ್‌ಇಲ್ಲ ಎಂದು ವಾಪಸ್ ಕಳಿಸುವ ಪದ್ಧತಿ ಇದೆ. ಈ ಪದ್ಧತಿ ನಿರಿಯೇ ಅಥವಾ ಗಾಯಗೊಂಡ ವಿದ್ಯಾರ್ಥಿಗಳು ಆಸ್ಪತ್ರೆಗೆ ಹೋದರೆ ಡಾಕ್ಟರ್ ಅವರ ಹೆಸರು ಮತ್ತು ಅವರಿಗೆ ಯಾರು ಹೊಡೆದರು ಎಂಬ ವಿವರಗಳನ್ನು ಬರೆದುಕೊಂಡು ಬ್ಯಾಂಡೇಜ್ ಕಟ್ಟಿ ಚಿಕಿತ್ಸೆ ಮಾಡಿ ಕಳಿಸುವುದು ಒಳ್ಳೆಯ ಪದ್ಧತಿಯಲ್ಲವೆ ; ಗಾಯಗೊಂಡ ವಿದ್ಯಾರ್ಥಿಗಳ ತಂದೆತಾಯಂದಿರು ಬಹಳ ನೊಂದುಕೊಂಡಿದ್ದಾರೆ. ಆದ್ದರಿಂದ ಈ ಬಗ್ಗೆ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಬೇಜವಾಬ್ದಾರಿಯಿಂದ ನಾನು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಮತ್ತೆ ಕೆಲವರು ಬೇಜವಾಬ್ದಾರಿಯಿಂದ ಪ್ರಶ್ನೆ ಕೇಳಿದ್ದಾರೆ. ಮಾನ್ಯ ಚೆನ್ನಬಸಪ್ಪನವರು ಮಾತನಾಡುತ್ತಾ ರೆಜಿಸ್ಟ್ರೇಷರ್ ಹೋಮ್‌ನಲ್ಲಿ ಕಾರ್ಯಕ್ರಮ ತಯಾರಾಗುತ್ತಿದ್ದರೆ ಆ ಬಗ್ಗೆ ಕರೆಕ್ಟ್ ಮಾಡಿದ ವಿವರಗಳನ್ನು ಸಭೆಯಮುಂದೆ ಇಡಬೇಕೆಂದು ಹೇಳಿದರು. ಅವರು ಸಹ ಸರ್ಕಾರ ನಡೆಸಿದ್ದಾರೆ. ಅವರಿಗೂ ಸಹ ಗೊತ್ತಿದೆ. ಎಲ್ಲ ವಿವರಗಳನ್ನು ಸಹ ಹೇಳಬೇಕೆಂದರೆ ಕಷ್ಟವಾಗುತ್ತದೆ. ಎಷ್ಟು ಸೂಕ್ತವೋ ಅಷ್ಟನ್ನು ಮಾತ್ರ ನಾನು ಈಗಾಗಲೇ ಹೇಳಿದ್ದೇನೆ.

Mr. SPEAKER.—The discussion is closed. The House will now rise for Tea and meet again after half-an-hour.

The House rose for Tea at Fifty Minutes past Three of the Clock and re-assembled at Twenty Minutes past Four of the Clock.

[MR. SPEAKER in the Chair.]

Twenty-fourth Report of the Business Advisory Committee

Mr. SPEAKER.—I beg to present the Twenty-fourth Report of the Business Advisory Committee.

Sri D. MANJUNATH (Mr. Deputy Speaker).—I beg to move:

"That the House agrees with the Twenty-fourth report of the Business Adveisory Committee."

Mr. SPEAKER.—The question is:

"That the House agrees his Twenty-fourth Report of the Business Advisory Committee."

The motion was adopted.

Supplementay and Additional Demands for Grants for 1970-71 (First Instalment)

Presentation

Sri B. RACHAIAH (Minister for Agricultutre).—On behalf of the Minister for Finance, Planning and Youth Welfare I beg to present a statement showing the Schedule for Supplementary and Additional Demands for grants for the year 1970-71 (first instalment) as required under Article 205 (1) of the Constitution of India.

Mr. SPEAKER.—A statement showing the schedule for Supplementary and Additional Demands for Grants for the year 1970-71 (first instalment) as required under Article 205 (1) of the Constitution of India is presented.

City of Bangalore Municipal Corporation (Amendment) Bill, 1970

(i) Statutory Resolution to disapprove Ordinance No. 1970.

(ii) Motion to Consider the Bill

(*Debate Contd.*)

ಅಧ್ಯಕ್ಷರು.—ಈಗ ಶ್ರೀಮಾನ್ ದಯಾನಂದ ಸಾಗರ್‌ರವರು ಮಾತನಾಡುತ್ತಾರೆ.

†Sri R. DAYANANDA SAGAR.—Mr. Speaker Sir, the Corporation elections have not been held for a long time. Now the Hon. Minister brings in a Bill and says that he is going to conduct the Corporation elections. He must assure this House Sir, when exactly he is going to hold the